ಶ್ರೀ ಜಿ. ನಾರಾಯಣಕುಮಾರ್.—ನನ್ನ ಕ್ಷೇತ್ರದಲ್ಲಿಯೂ ಸಹ ಮಳೆಯಿಂದ ಅನೇಕ ಮನೆಗಳು ಬಿದ್ದು ಹೋಗಿವೆ. ಈ ವಿಷಯವನ್ನು ಸರ್ಕಾರದವರು ಲಘುವಾಗಿ ತೆಗೆದುಕೊಳ್ಳಬಾರದು.

ಅಧ್ಯಕ್ಷರು.—ಮಾನ್ಯ ಸದಸ್ಯರು ನೋಟೀಸ್ ಇಲ್ಲದೆ ಹಾಗೆ ವಿಷಯಗಳನ್ನು ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ.ನಾರಾಯಣಕುಮಾರ್.—ಗರ್ಭಿಣಿ ಹೆಂಗಸೊಬ್ಬರು ಆಸ್ಪತ್ರೆಯಲ್ಲಿ ಸಾವು ನೋವಿನ ಜೊತೆಯಲ್ಲಿ ಹೋರಾಟ ಮಾಡುತ್ತಿದ್ದಾಳೆ, ಬಡವರಿಗೆ ಮನೆಗಳನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನಾಳೆಯ ದಿವಸವೇ ಮಾನ್ಯ ಮಂತ್ರಿಗಳು ಮಳೆಯಲ್ಲಿ ನೊಂದವರ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು.—ತಾವುಗಳು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ.

ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣರ ತಾಲ್ಲೂಕಿನಲ್ಲಿ ನಾಲ್ಕು ಹರಿಜನ ಬಂಧುಗಳ ಮನೆ ಸುಟ್ಟು ಹೋಗಿ ಜೀವ ಸಹಿತ ಅವರು ದಹನವಾಗಿದ್ದಾರೆ, ಇದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಡಬೇಕು. ಪಟ್ಟಣಗಳಲ್ಲಿರುವ ಹರಿಜನರ ಬಗ್ಗೆ ಸರ್ಕಾರದವರು ಕಾಳಜಿ ವಹಿಸುತ್ತಾರೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಹರಿಜನ ಗಿರಿಜನರಿಗೆ ಸಾಕಷ್ಟು ಕಾಳಜಿ ಇಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಘಟನೆ ಸವರ್ಣೀಯರಿಗೆ ಯಾರೊಬ್ಬರಿಂದ ಉದ್ದೇಶಪೂರ್ವಕವಾಗಿ ಆದಂಥಾದ್ದು ಅಲ್ಲ. ಇದು ವೈಯಕ್ತಿಕ ಕಾರಣದಿಂದ ಆಗಿದೆ, ಒಂದು ಕುಟುಂಬದಲ್ಲಿ ಒಬ್ಬ ಹೆಂಗಸು ಇದ್ದಳು, ಆ ಹೆಂಗಸು ಬೇರೊಂದು ಊರಿನ ಮತ್ತೊಬ್ಬನೊಂದಿಗೆ ಸಂಬಂಧವನ್ನು ಹೊಂದಿದ್ದಳು. ಅವನು ಮದುವೆಯಾಗಬೇಕು ಎಂದು ಅವಳನ್ನು ಕೇಳುತ್ತಿದ್ದ, ಅವಳು ಒಪ್ಪುತ್ತಾ ಇರಲಿಲ್ಲ. ಇವನು ಮದುವೆಯಾಗು ಎಂದು ಅವಳನ್ನು ಹೆದರಿಸುತ್ತಿದ್ದ. ಮದುವೆಯಾಗದಿದ್ದರೆ ಮನೆಯನ್ನು ಸುಟ್ಟು ಹಾಕುತ್ತೇನೆಂದು ಹೇಳಿ ಅವಳ ಮನೆಗೆ ಬೆಂಕಿ ಹಾಕಿದ್ದಾನೆ. ಇದನ್ನು ದೊಡ್ಡದು ಮಾಡುವುದು ಸರಿಯಲ್ಲ. ನಾವು ಘಟನೆಯಿಂದ ಘಟನೆಗೆ ನೋಡಬೇಕು. ತಂದೆ ಮಗನನ್ನು ಕೊಲ್ಲುತ್ತಾನೆ, ಮಗ ತಂದೆಯನ್ನು ಕೊಲ್ಲುತ್ತಾನೆ, ಇದು ಆಗಬಾರದು ಎಂದು ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಹರಿಜನರ ಜೀವ ಹೋಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಕ್ರಿಮಿನಲ್ ಕೇಸ್ ಆಗಿದೆ. ಅವನು ವೈಯಕ್ತಿಕ ಕಾರಣಕ್ಕಾಗಿ ಬೆಂಕಿ ಹಾಕಿ ಮನೆಯನ್ನು ಸುಟ್ಟಿದ್ದಾನೆ. ಅದಕ್ಕೆ ಅಸೆಂಬ್ಲಿಯಲ್ಲಿ ಹೇಳಿಕೆ ಕೊಡುವುದು ಹೇಗೆ? ಇದರ ಮೇಲೆ ಪೋಲಿಸರು ಕೇಸು ಹಾಕುತ್ತಾರೆ, ಕೋರ್ಟಿನಲ್ಲಿ ಏನು ತೀರ್ಮಾನ ಕೊಡುತ್ತಾರೋ ಅದರಂತೆ ಅವನು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ನಿಯಮ ೩೩೪ರ ಮೇರೆಗೆ

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ರಸ್ತೆ ಸಾರಿಗೆಯ ಒಬ್ಬ ಅಧಿಕಾರಿಯ ಬಗ್ಗೆ ನೋಟೀಸನ್ನು ಕಳುಹಿಸಿದ್ದಾರೆ. ಅದನ್ನು ರೂಲ್ ೩೩೪ರ ಕೆಳಗೆ ತೆಗೆದುಕೊಳ್ಳುವುದು ಸೂಕ್ತವೇ It is a routine administrative matter. Don't you think so ?

Sri. S. Bangarappa.—I would like to justify why this matter comes under rule 334. ತಾವು ಒಂದು ನಿಮಿಷ ನನಗೆ ಅವಕಾಶವನ್ನು ಕೊಟ್ಟರೆ ರೂಲ್ ೩೩೪ರಲ್ಲಿ ಹೇಗೆ ಇದನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಹೇಳುತ್ತೇನೆ.

ಈ ವಿಚಾರವನ್ನು ನಾವು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿದ್ದೇವೆ ಮತ್ತು ಇದರ ಬಗ್ಗೆ ಸರ್ಕಾರದ ಹೇಳಿಕೆಯನ್ನೂ ಕೂಡ ಬಯಸುತ್ತೇವೆ. ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಕೆಲಸ

ಮಾಡುತ್ತಾ ಇರತಕ್ಕ ಚೀಫ್ ಸೆಕ್ಯೂರಿಟಿ ಆಫೀಸರ್ ಅಂಡ್ ಪರ್ಸನಲ್ ಮ್ಯಾನೇಜರ್ ಐಪಿಎಸ್ ಆಫೀಸರ್ ಕೋದಂಡರಾಮಯ್ಯ ಇವರನ್ನು ರಜೆಯ ಮೇಲೆ ಹೋಗಲು ಸರ್ಕಾರದವರು ತಿಳಿಸಿದ್ದಾರೆ. ಸರ್ಕಾರದ ಹೇಳಿಕೆಯನ್ನು ನೋಡಿ ನಾವು ಇದು ಸರಿಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಹಿಂದೆ ಕಂಟ್ರಾಕ್ಟ್ ಕ್ಯಾರೇಜಸ್‌ಗಳು ನ್ಯಾಷನಲೈಸ್ ಆದಮೇಲೆ ಅಲ್ಲಿ ಕೆಲಸ ಮಾಡತಕ್ಕವರಿಗೆ ಕೆಎಸ್‌ಆರ್‌ಟಿಸಿ ಯಲ್ಲಿ ಕೆಲಸ ಕೊಡಬೇಕು ಎನ್ನುವ ವಾದ ಇದೆ. ಇದರಲ್ಲಿ ಸುಮಾರು ೩೦೦ ಜನರಿಗೆ ಕೆಲಸವನ್ನು ಕೊಟ್ಟಿದ್ದಾರೆ ಇನ್ನುಳಿದವರಿಗೆ ಕೆಲಸ ಕೊಡಬೇಕು, ಇದಕ್ಕೆ ನನ್ನ ವಿರೋಧವಿಲ್ಲ. ಸರ್ಕಾರದವರು ಅವರೆಲ್ಲರಿಗೂ ನೌಕರಿಯನ್ನು ಕೊಟ್ಟರೆ ಇದು ಬಹಳ ಸಂತೋಷಪಡತಕ್ಕ ವಿಚಾರ.

ಆದರೆ ನೌಕರಿ ಕೊಡತಕ್ಕ ಸಂದರ್ಭದಲ್ಲಿ ೧೯೮೦ ರಲ್ಲಿ ಸುಪ್ರೀಂ ಕೋರ್ಟಿಗೆ ಹೋಗಿತ್ತು. ಆದುದರಿಂದಅಲ್ಲಿ ಸರ್ಕಾರದವರು ಎಷ್ಟೆಷ್ಟು ತೆಗೆದುಕೊಳ್ಳಬೇಕು ಎನ್ನುವುದು ಇದೆ, ಜೊತೆಗೆ ಅಡ್ವೋಕೇಟ್ ಜನರಲ್ ಅವರು ಹೈಕೋರ್ಟಿನಲ್ಲಿ ರಾಜ್ಯ ಸರ್ಕಾರದ ಪರವಾಗಿ ಏನು ಅಶ್ಯೂರೆನ್ಸ್ ಕೊಟ್ಟಿದ್ದರು ಅದಕ್ಕೆ ಅನುಗುಣವಾಗಿ ಈ ಒಂದು ನೇಮಕ ಎನ್ನುವುದು ಇದೆ ಯಾವುದೇ ನೇಮಕಾತಿಯನ್ನು ಮಾಡಬೇಕಾದರೆ ರಾಜ್ಯ ಸರ್ಕಾರದವರು ಕಾನೂನಿನ ಚೌಕಟ್ಟಿನಲ್ಲಿ ಮಾತ್ರ ಮಾಡಬೇಕಾಗುತ್ತದೆ. ಬೇರೆ ದಾರಿ ಸರ್ಕಾರಕ್ಕೆ ಕೂಡ ಉಳಿಯುವುದಿಲ್ಲ. ಬಾಯಿಮಾತಿನ ಮೂಲಕ ಇಂಥವರನ್ನು ತೆಗೆದುಕೊಳ್ಳಿ ಎಂದರೆ ಆಗುವುದಿಲ್ಲ, ಮತ್ತು ಅವರಿಗೆ ಕೆಲಸ ಸಿಕ್ಕುವುದಿಲ್ಲ. ಜೊತೆಗೆ ಯಾರು ಅಧಿಕಾರಿಗಳು ನೇಮಕಾತಿಯನ್ನು ಮಾಡಬೇಕಾಗುತ್ತದೆ ಅವರಿಗೆ,ಮುಖ್ಯ ಮಂತ್ರಿಗಳು ಆರ್ಡರ್ ಕೊಡಲಿಕ್ಕೆ ಸಾಧ್ಯವಿಲ್ಲ, ಆ ಜಾಗದಲ್ಲಿ ಯಾರೇ ಇರಲಿ, ಆಗುವುದಿಲ್ಲ. ಮತ್ತು ಆ ರೀತಿ ಹೇಳಿದರೂ ಕೂಡ ನೇಮಕಾತಿ ಮಾಡತಕ್ಕಂಥ ಅಧಿಕಾರಿಗಳಿಗೂ ತೊಂದರೆ ಬರುತ್ತದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕೊಠಡಿಯಲ್ಲೂ ಸಭೆಗಳು ನಡೆದಿವೆ. ಸಾರಿಗೆ ಸಂಸ್ಥೆಯ ಮಂತ್ರಿಗಳಾದ ಮಾನ್ಯ ಎಂ. ಪಿ. ಪ್ರಕಾಶ್ ರವರೂ ಕೂಡ ಅಲ್ಲಿದ್ದರು ಮತ್ತು ಹೋಂ ಕಮಿಷನರ್ ಮುದ್ದಪ್ಪನವರೂ ಕೂಡ ಅಲ್ಲಿದ್ದರು ಎನ್ನತಕ್ಕ ವಿಚಾರವನ್ನು ನಾನು ಕೇಳಿದ್ದೇನೆ. ಮುಖ್ಯಮಂತ್ರಿಗಳ ಕೊಠಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇದ್ದರು. ವಿಾಟಿಂಗ್ ಮಾಡಿದ್ದು ಬಹಳ ಒಳ್ಳೆಯದು. ನಾನು ಅದರ ಬಗ್ಗೆ ಭಿನ್ನಾಭಿಪ್ರಾಯ ಇಟ್ಟುಕೊಂಡಿಲ್ಲ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ನೇಮಕಾತಿ ಮಾಡತಕ್ಕ ಸಂದರ್ಭದಲ್ಲಿ ಈ ಹಿರಿಯ ಐ.ಪಿ.ಎಸ್. ಅಧಿಕಾರಿಗಳ ಹೊಗಳಿಕೆ ಪ್ರಶ್ನೆಯಲ್ಲ. He is one of the best officers that we are having in the State Governmtent....ನನಗೆ ಗೊತ್ತಿರುವ ಹಾಗೆ ಕೋದಂಡರಾಮಯ್ಯನವರು ಯಾವಾಗಲೂ ಕಾನೂನು ಪ್ರಕಾರ ವಿಚಾರ ಹೇಳತಕ್ಕ ಸ್ವಭಾವದವರು, ನಮಗೆಲ್ಲಾ ಅವರ ಬಗ್ಗೆ ಗೊತ್ತಿದೆ. ಆ ಸಭೆಯಲ್ಲಿ ಅವರು ಕಾನೂನು ಪ್ರಕಾರ ನೇಮಕಾತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು, Unless the existing rules under which these rules are to be made, are amended properly ಎನ್ನತಕ್ಕ ಅಭಿಪ್ರಾಯವನ್ನು ಹೇಳಿದಾಗ Even the Transport Minister agreed for the suggestion, including the other officers who are present in the very meeting ಎನ್ನತಕ್ಕಂಥ ಅಭಿಪ್ರಾಯ ಕೂಡ ಬಂದಿದೆ. ಇದರಲ್ಲಿ ಯಾವರೀತಿಯಾದ ರಾಜಕೀಯವನ್ನೂ ನಾನು ಬೆರೆಸುವುದಕ್ಕೆ ಹೋಗುವುದಿಲ್ಲ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ಕಾನೂನು ಪ್ರಕಾರ ನೇಮಕಾತಿ ಮಾಡುವುದಕ್ಕೆ ಆಗುವುದಿಲ್ಲ, ಮಾಡಿದರೆ ನಮ್ಮನ್ನು ನಾಳೆ ಹಿಡಿದುಕೊಳ್ಳಬಹುದು, ಇಲ್ಲ ಹೈಕೋರ್ಟಿಗೆ ರಿಟ್ ಹಾಕತಕ್ಕ ಸಂದರ್ಭಗಳೂ ಕೂಡ ಇವೆ ಎನ್ನತಕ್ಕ ಮಾತನ್ನು ಹೇಳುವುದು ಆಫೀಸರ್ ಕರ್ತವ್ಯವಾಗುತ್ತದೆ. ನಾವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೆವೆ, ಅನೇಕ ಜನ ಮಂತ್ರಿಗಳಾಗಿ ಕೆಲಸಮಾಡಿದ್ದಾರೆ, ನಮಗೆ ಆಡ್ವೈಸ್ ಮಾಡತಕ್ಕಂಥಾದ್ದು ಇದು ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ತಪ್ಪು ತಿಳಿದುಕೊಳ್ಳಬಾರದು. ಒಂದುವೇಳೆ ಕಾನೂನು ಸರಿ ಇಲ್ಲದೇ ಹೋದರೆ ಕಾನೂನನ್ನು ಸರಿಮಾಡತಕ್ಕ ವಿಚಾರವನ್ನು ಮಾಡಬೇಕೇ ವಿನಹ ಕಾನೂನಿಗೆ ವ್ಯತಿರಿಕ್ತವಾಗಿ ಒಂದು ಬಾಯಿಮಾತಿನ ಆದೇಶ ಕೊಡುವುದಾದರೆ ಅದರ ಮೂಲಕ ಅಧಿಕಾರಿಗೆ ತೊಂದರೆ ಕೊಟ್ಟ ಹಾಗೆ ಆಗುತ್ತದೆ, ಕಾನೂನು ಮುರಿದ ಹಾಗೆ ಆಗುತ್ತದೆ, ಇದರಿಂದ ಅಂತಿಮವಾಗಿ ಯಾರಿಗೆ ಸಹಾಯ ಮಾಡಬೇಕೋ ಅವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ದೃಷ್ಟಿಯಿಂದ ಬಾಯಿ ಮಾತಿನ ಆದೇಶ ಕೊಡುವ ಬದಲು ಕಾನೂನು ಬದಲಾವಣೆಮಾಡಿ ಕಾನೂನಿನ ಚೌಕಟ್ಟಿನಲ್ಲಿ ಆದೇಶವನ್ನು ಕೊಟ್ಟು ಬಿಟ್ಟಿದ್ದರೆ ಯಾವ ತೊಂದರೆಯೂ ಬರುತ್ತಾ ಇರಲಿಲ್ಲ. ಇಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ ಬಾಯಿಮಾತಿನ ಆದೇಶವನ್ನು ಐ.ಪಿ.ಎಸ್. ಅಧಿಕಾರಿ ಕೋದಂಡ

ರಾಮಯ್ಯನವರು ಪರಿಪಾಲನೆ ಮಾಡಲಿಲ್ಲ ಎನ್ನುವ ಕಾರಣದ ಮೇಲೆ ನೀವು ಸರ್ಕಾರದ ಆದೇಶವನ್ನು ಉಲ್ಲಂಘಿಸಿದ್ದೀರಿ, ಎನ್ನತಕ್ಕ ವಿಚಾರವನ್ನು ಸರ್ಕಾರದವರು ಗಣನೆಗೆ ತೆಗೆದುಕೊಂಡು ದಿಕ್ಕರಿಸಿದ್ದೀರಿ, ಅದಕ್ಕೋಸ್ಕರ ನೀವು ತಕ್ಷಣ ರಜದ ಮೇಲೆ ಹೊಗಬೇಕು ಎಂದು ಆದೇಶವನ್ನು ಕೊಟ್ಟಿದ್ದಾರೆ. ರಜದ ಮೇಲೆ ನೀವು ಕಂಪಲ್ಸರಿಯಾಗಿ ಹೋಗಲೇಬೇಕು ಎನ್ನುವ ಲಿಖಿತ ಆದೇಶ ಹೊಗಿದೆಯೆಂದು ಗೊತ್ತಾಗಿದೆ. ಕಾನೂನು ಪ್ರಕಾರ ಕೆಲಸಮಾಡತಕ್ಕ ಒಬ್ಬ ಒಳ್ಳೆಯ ಅಧಿಕಾರಿಯನ್ನು ಸರ್ಕಾರ ಕಾನೂನು ಬಿಟ್ಟು ಕೊಡತಕ್ಕ ಒರಲ್ ಡೈರೆಕ್ಷನ್ ಏನಿದೆ ಆ ಆದೇಶವನ್ನು ಪಾಲಿಸಲಿಲ್ಲ ಎನ್ನುವ ಕಾರಣದ ಮೇಲೆ ಕಳಿಹಿಸಿಕೊಡತಕ್ಕ ವಿಧಾನ. ಹಿಂದೆ ಕೂಡ ಈ ರೀತಿ ಅನೇಕ ಘಟನೆಗಳು ನಡೆದಿವೆ, ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾವುದೇ ಸರ್ಕಾರ ಮಾಡಿರಲಿ, ಯಾರೇ ಮಾಡಿರಲಿ, ಆದೇಶವನ್ನು ಬಾಯಿಮಾತಿನ ಮೂಲಕ ಕೊಟ್ಟರೆ ಕಾನೂನು ಪ್ರಕಾರ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಬಾಯಿಮಾತಿನ ಆದೇಶವನ್ನು ಕೊಡಕೂಡದು ಎನ್ನುವ ಅರಿವು ನಮಗೆ ಇರಬೇಕಾಗುತ್ತದೆ, ಅದನ್ನು ಈ ಸರ್ಕಾರ ಅರಿತ್ತಿಲ್ಲ ಎನ್ನುವುದು ಪ್ರಶ್ನೆ, ವಾಸ್ತವಾಂಶ ಸಭೆಯ ಮುಂದಿದೆ. ಆ ಅಧಿಕಾರಿಗೆ ರಜದ ಮೇಲೆ ಕಳಿಹಿಸಿ ಕೊಡುವುದಕ್ಕೆ ಒತ್ತಡ ಮಾಡುವುದಕ್ಕೆ ಅಂತಹ ಸಕಾರಣಗಳು ಏನು ಎನ್ನುವುದನ್ನು ಹೇಳಬೇಕು ? ಆದರಿಂದ ನಮಗೂ ಕೂಡ ಒಳ್ಳೆಯದಾಗತ್ತದೆ ಸಕಾರಣ ಇಲ್ಲದೇಹೋದರೆ ಒಳ್ಳೆಯ ಅಧಿಕಾರಿಯನ್ನು ಕೆಲಸಮಾಡುವುದಕ್ಕೆ ಬಿಡುತ್ತಾ ಇಲ್ಲ, ಕಾನೂನು ಪ್ರಕಾರ ಕೆಲಸ ಮಾಡುವುದಕ್ಕೆ ಯಾರಿಗೂ ಬಿಡುತ್ತಾ ಇಲ್ಲ. ಇದರಿಂದ ಯಾರಿಗೆ ನೌಕರಿ ಕೊಡಬೇಕು ಎಂದು ಇರುತ್ತದೋ ಅವರಿಗೆ ನೌಕರಿ ಕೊಡುವುದಕ್ಕೆ ಆಗುವುದಿಲ್ಲ ಎಂಬ ಅಂಶವನ್ನು ನಾನು ಇಲ್ಲಿ ಹೇಳುತ್ತಾ ಇದ್ದೇನೆ. ಕನಕಪುರ ಚುನಾವಣೆಯ ಕಾಲದಲ್ಲಿ ಕಾಂಟ್ರಾಕ್ಟ್ ಕ್ಯಾರೇಜಸ್‌ನಲ್ಲಿ ಕೆಲಸಮಾಡಿದಂಥ ಜನ ಹಿಂದಿನ ಸರ್ಕಾರದ ಮುಂದೆಯೂ ಬೆಡಿಕೆಯನ್ನು ಇಟ್ಟಿದ್ದರು ಅವರು ಕನಕಪುರ ಚುನಾವಣೆ ಕಾಲದಲ್ಲಿ ಮುಖ್ಯ ಮಂತ್ರಿಗಳ ಪರವಾಗಿ ಕೆಲಸ ಮಾಡಿದರು ಎನ್ನತಕ್ಕಂಥ ಅಂಶಕ್ಕೋಸ್ಕರ ಮುಖ್ಯ ಮಂತ್ರಿಗಳು ಈ ಬಾಯಿಮಾತಿನ ಆದೇಶವನ್ನು ಕೋದಂಡ ರಾಮಯ್ಯನವರಿಗೆ ಅಥವಾ ಕೆ.ಎಸ್‌ಆರ್.ಟಿ.ಸಿ. ಗೆ ಕೊಟ್ಟರು ಎನ್ನತಕ್ಕಂಥ ಅಂಶ ಇಲ್ಲಿ ಸ್ಪಷ್ಟವಾಗಿ ಗೊತ್ತಾಗಿದೆ. ಈ ವಿಚಾರದಲ್ಲಿ ಸಾರಿಗೆ ಸಚಿವರ ತಪ್ಪು ಏನೇನೂ ಇಲ್ಲ. ಮುಖ್ಯ ಮಂತ್ರಿಗಳ ಕಚೇರಿಯಲ್ಲಿ ಆದಂಥ ಈ ಒಂದು ಸಭೆಯಲ್ಲಿ ನೇರವಾಗಿ ಈ ವಿಚಾರ ಪ್ರಸ್ತಾಪಕ್ಕೆ ಬಂದುದರಿಂದ ಸಾರಿಗೆ ಸಚಿವರಾದ ಎ.ಂ ಪಿ. ಪ್ರಕಾಶ್‌ರವರು ಕಾನೂನು ಪ್ರಕಾರ ಹೋಗತಕ್ಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ. ಐ.ಪಿ.ಎಸ್. ಅಧಿಕಾರಿಯನ್ನು ಕಂಪಲ್ಸರಿಯಾಗಿ ರಜದ ಮೇಲೆ ಕಳಿಸುವುದಕ್ಕೆ ಮುಖ್ಯಮಂತ್ರಿಗಳ ಕಚೇರಿಯಿಂದ ಒಂದು ಒತ್ತಡ ಮುಖ್ಯ ಕಾರ್ಯದರ್ಶಿಗಳ ಮೂಲಕ ಹೋಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ರಾಜ್ಯಸರ್ಕಾರದ ನೀತಿ ಏನಿದೆ, ಕಾನೂನು ಪಾಲಿಸತಕ್ಕ ಒಬ್ಬ ಒಳ್ಳೆಯ ಅಧಿಕಾರಿಯನ್ನು ಕಾನೂನು ಬದಲಾವಣೆ ಮಾಡುವುದಕ್ಕೆ ಯೋಚನೆ ಮಾಡದೆ ಅವರನ್ನು ರಜದ ಮೇಲೆ ಹೋಗತಕ್ಕ ಆದೇಶವನ್ನು ಕೊಟ್ಟಿದ್ದಾರೆ. ಆದುದರಿಂದ ಕಾನೂನಿಗೆ ವಿರುದ್ಧವಾದ ಸರ್ಕಾರದ ಈ ನೀತಿಯನ್ನು ನಾನು ಖಂಡಿಸಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದ ನೀತಿ ಏನು ಎನ್ನುವುದಕ್ಕೆ ತಮ್ಮ ಮೂಲಕ ಸರ್ಕಾರದಿಂದ ಹೇಳಿಕೆಯನ್ನು ಬಯಸುತ್ತಾ ಇದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಮಾಮೂಲಾಗಿ ನಡೆದಿರತಕ್ಕ ಮತ್ತು ಕಾನೂನು ಬದ್ಧವಾಗಿ ನಡೆದಿರತಕ್ಕ ಎಲ್ಲಾ ಕ್ರಿಯೆಗಳನ್ನು ಬೇರೆ ಬೇರೆ ಅರ್ಥದಲ್ಲಿ ಮತ್ತು ರಾಜಕೀಯವಾಗಿ ಕೂಡ ಅವುಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಬಹಳ ದುರದೃಷ್ಟಕರವಾಗಿರತಕ್ಕಂಥ ವಿಷಯವಾಗಿದೆ. ಸನ್ಮಾನ್ಯ ಅಧ್ಯಕ್ಷರೆ, ೧೯೭೬ ರಲ್ಲಿ ಕಾಂಟ್ರಾಕ್ಟ್ ಕ್ಯಾರೇಜಸ್‌ಗಳನ್ನು ರಾಷ್ಟ್ರೀಕರಣ ಮಾಡಿರತಕ್ಕ ಸಂದರ್ಭದಲ್ಲಿ ಆ ಆರ್ಡಿನೆನ್ಸ್‌ನಲ್ಲಿರತಕ್ಕ ಒಂದು ನಿಷ್ಪತ್ತಿಯಲ್ಲಿ ಬಸ್ಸಿಗೆ ಇಷ್ಟು ನೌಕರರು ಇರಬೇಕು ಎಂದು ಇತ್ತು, ಮತ್ತು ಸುಮಾರು ೮ ಎಂದು ಇತ್ತು, ಆದು ಮುಂದೆ ಕಾನೂನು ಆದಾಗ ನಿಷ್ಪತ್ತಿಯನ್ನು ೪.೬೫ಕ್ಕೆ ಇಳಿಸಲಾಯಿತು. ಆ ಸಂದರ್ಭದಲ್ಲಿ ಕಾಂಟ್ರಾಕ್ಟ್ ಕ್ಯಾರೇಜಸ್‌ನ ಹಳೆಯ ಮಾಲೀಕರು ನಮ್ಮಲ್ಲಿ ೮೦೦ ನೌಕರರು ಇದ್ದರು ಎನ್ನತಕ್ಕಂಥ ರೀತಿಯಲ್ಲಿ ಸ್ಟಾಟ್ಸ್‌ರ್ ಮಾಡಿದರು. ಆ ನಿಷ್ಪತ್ತಿ ವ್ಯತ್ಯಾಸವಾದಂಥ ಸಂದರ್ಭದಲ್ಲಿ ೨೬೫ ಜನಗಳನ್ನು ಮಾತ್ರ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಯಿತು. ಆ ಸಂದರ್ಭದಲ್ಲಿ ಕೆಲವೊಂದು ಜನ ನಿಷ್ಪತ್ತಿಯನ್ನು ವ್ಯತ್ಯಾಸಮಾಡಿರತಕ್ಕಂಥಾದ್ದನ್ನೂ, ಆರ್ಡಿನೆನ್ಸ್ ನಲ್ಲಿರತಕ್ಕಂಥಾದ್ದನ್ನೂ ಈ ವ್ಯತ್ಯಾಸಗಳನ್ನು ಪ್ರಶ್ನೆಮಾಡಿ ಹೈಕೋರ್ಟಿಗೆ ಹೋದರು. ಹೋದಂಥ ಸಂದರ್ಭದಲ್ಲಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದು, ಹಿಂದಿನ ಕಾಂಟ್ರಾಕ್ಟ್ ಕ್ಯಾರೇಜ್‌ನಲ್ಲಿ ಯಾರು ಯಾರು ಕೆಲಸ ಮಾಡಿದ್ದಾರೆ, ಆ ಕೆಲಸಮಾಡಿರತಕ್ಕ ನೌಕರರನ್ನು ಹಾಗೇ ಕೆಲಸದಲ್ಲಿ ಮುಂದುವರಿಸಿ ಎನ್ನುವಂಥ ತಾತ್ಕಾಲಿಕವಾದಂಥ ಆಜ್ಞೆಯನ್ನೂ ಕೂಡ ಸೇರಿಸಿ ನ್ಯಾಯವನ್ನು ಪಡೆದುಕೊಂಡರು. ೬ ತಿಂಗಳು,

ರ ತಿಂಗಳು, ಒಂದು ವರ್ಷದವರೆಗೆ ಕೆಲಸವನ್ನು ನಿರ್ವಹಿಸುತ್ತಿದ್ದರು. ಆ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ಸರ್ಕಾರ ಮಾಡಿರತಕ್ಕ ನಿಷ್ಪತ್ತಿ ಕ್ರಮವಾಗಿದೆ, ಕಾರ್ಪೊರೆಷನ್ ತೆಗೆದುಕೊಂಡಿರತಕ್ಕ ನಿಲುವು ಸಮಂಜಸವಾದುದು ಎನ್ನುವ ತೀರ್ಮಾನದಿಂದ ಇವರಿಗೆ ತೊಂದರೆಯಾಗಿದೆ ಎಂದು ಯೋಚನೆ ಮಾಡಿ ೭೧೨ ಜನ ಸುಪ್ರೀಂ ಕೋರ್ಟಿಗೆ ಹೋದರು. ಇದನ್ನು ಏಕೆ ಪ್ರಸ್ತಾಪಮಾಡುತ್ತಿದ್ದೇನೆ ಎಂದರೆ ಕನಕಪುರ ಚುನಾವಣೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದರಿಂದ ಹೇಳುತ್ತಿದ್ದೇನೆ. ಸುಪ್ರೀಂಕೋರ್ಟಿನಲ್ಲಿ ಈ ನಿಷ್ಪತ್ತಿ ಸರಿಯಾದುದು ಎಂದು ತೀರ್ಮಾನವಾಯಿತು. ಹಿಂದೆ ಹೈಕೋರ್ಟಿನಲ್ಲೂ ಕೂಡ ಅಡ್ವೋಕೇಟ್ ಜನರಲ್‌ರವರು ಕೆಳದರ್ಜೆ ನೌಕರಿಯಲ್ಲಿರತಕ್ಕ ಕಂಡಕ್ಟರ್, ಡ್ರೈವರ್ ವಾಚ್‌ಮನ್ ಮೊದಲಾಗಿರತಕ್ಕ ನೌಕರರುಗಳಲ್ಲಿ ಅವರು ನಿಜವಾದ ಕಾಂಟ್ರಾಕ್ಟ್ ಕ್ಯಾರೆಜ್ ನೌಕರರಾಗಿದ್ದರೆ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥಾದನ್ನು ಮಾನವೀಯ ದೃಷ್ಟಿಯಿಂದ ಅವಲೋಚಿಸುವುದು ಎನ್ನುವ ಮಾತನ್ನು ಹೇಳಿದ್ದರು. ಈ ದೃಷ್ಟಿಯಿಂದ ಹಿಂದಿನ ಸರ್ಕಾರಕ್ಕೆ ಮಾನವಿ ಕೊಟ್ಟಾಗ ಹಿಂದಿನ ಸರ್ಕಾರದವರು ಅವರುಗಳನ್ನು ಪರಿಗಣಿಸಿ ಆದರಲ್ಲಿ ೮೧ ಜನಗಳನ್ನು ಪುರ್ನನೇಮಕ ಮಾಡಿಕೊಳ್ಳಬೇಕೆಂದು ಆಜ್ಞೆಯನ್ನು ಕೊಟ್ಟರು ಆ ಸಂದರ್ಭದಲ್ಲಿ ೪೧ ಜನ ಕೆಲಸಕ್ಕೆ ಸೇರಿಕೊಂಡರು. ಈ ಸರ್ಕಾರ ಬಂದ ತಕ್ಷಣ ಮಾನವಿಯನ್ನು ಕೊಟ್ಟರು. ಕಾಂಟ್ರಾಕ್ಟ್ ಕ್ಯಾರೇಜ್ ನೌಕರರು ನೊಂದಾಯಿಸಲ್ಪಟ್ಟ ನೌಕರರ ಸಂಘದ ಮೂಲಕ ಮಾನವಿ ಕೊಟ್ಟರು. ಅವರು ಕನಕಪುರಕ್ಕೆ ಸಂಬಂಧಪಟ್ಟವರಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟವರು. ೧೬೦೦ ಜನ ಹೈಕೋರ್ಟಿಗೆ ಹೋದರು, ಇವರನ್ನು ತೆಗೆದುಕೊಳ್ಳ ಬೇಕೇ ಬೇಡವೇ, ಮಾನವೀಯ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇ ಕೇ ಬೇಡವೇ ಎನ್ನುವ ಹಂತದಲ್ಲಿ ಸರ್ಕಾರ ಇದೆ.

ಆ ಬಗ್ಗೆ ಲಿಖಿತ ಮೂಲಕವಾಗಿ ಅವರು ಸೂಚನೆ ಕೊಟ್ಟಿದ್ದಾರೆ ಆದರ ಬಗ್ಗೆ ಅಂತಿಮವಾಗಿ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಮುಖ್ಯಮಂತ್ರಿಗಳವರ ಕಛೇರಿಯಲ್ಲಿ ನಡೆದಿರತಕ್ಕ ವಿಷಯದ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಕೋದಂಡರಾಮಯ್ಯನವರು ಏನು ಸಲಹೆ ಕೊಟ್ಟಿದ್ದಾರೆ ಆದರ ಬಗ್ಗೆ ಚರ್ಚೆ ಬಂದಾಗ ನಾನು ಕೂಡ ಇದ್ದೆ. ನಮ್ಮ ಗೃಹ ಮಂತ್ರಿಗಳೂ ಇದ್ದರು ಮತ್ತು ನಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ಜಗನ್ನಾಥ್‌ರವರೂ ಸಹ ಇದ್ದರು. ಆಗ ಶ್ರೀ ಪ್ರಭಾಕರ್‌ರವರು ಛೇರ್ಮನ್ ಆಗಿರಲಿಲ್ಲ. ಆ ಸಮಯದಲ್ಲಿ ಮಾನವೀಯತೆಯ ದೃಷ್ಟಿಯಿಂದ ನೋಡತಕ್ಕ ಮಾನವಿ ಬಂದಿದೆ ಆದನ್ನು ಪರಿಶೀಲಿಸುವುದು ಸೂಕ್ತ ಆದರ ಬಗ್ಗೆ ಕಾನೂನಿನ ಅಡಚಣೆ ಏನಾದರೂ ಇದೆಯೇ ಎಂಬುದನ್ನು ನೋಡಿ ಕ್ರಮ ತೆಗೆದುಕೊಳ್ಳಿ ಎನ್ನುವ ಮಾತನ್ನು ಹೇಳಿದರೇ ವಿನಹ ಇದರಲ್ಲಿ ತಿಕ್ಕಾಟ ಬರತಕ್ಕದ್ದು ಏನೂ ಇಲ್ಲ. ಅಧ್ಯಕ್ಷರೇ, ಈ ಕೋದಂಡರಾಮಯ್ಯನವರು ಈ ಜನಗಳನ್ನು ಯಾವ ರೀತಿಯಾಗಿ ಅಬ್‌ಸರ್ವ್ ಮಾಡಿಕೊಳ್ಳಬಹುದು ಎನ್ನುವ ಬಗ್ಗೆ ಕೂಡ ನೋಟ್ ಕೊಟ್ಟಿದ್ದಾರೆ. ಆದುದರಿಂದ ಇಲ್ಲಿ ಮುಖ್ಯಮಂತ್ರಿಗಳವರ ಹೆಸರನ್ನು ಪ್ರಸ್ತಾಪ ಮಾಡತಕ್ಕದ್ದು ಸರಿಯಾದ ಕ್ರಮವಲ್ಲವೆಂದು ಈ ಸದನದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸ್ವಲ್ಪದಿವಸವಾದ ಮೆಲೆ ಐ.ಎನ್.ಟಿ.ಯು.ಸಿ.ಯ ಸತ್ಯಾಗ್ರಹ ಮಾಡುತ್ತಿದ್ದರು. ಕಾರ್ಮಿಕ ಫೆಡರೇಷನ್ನಿನವರ ಹೆಸರನ್ನು ಹೇಳುತ್ತೇನೆ ಅವರ ಹೆಸರು ಸಂಪಂಗಿ ಎಂದು, ಅವರ ಅಧ್ಯಕ್ಷತೆಯಲ್ಲಿ ಐ ಎನ್ ಟಿ ಯು ಸಿ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಚಳುವಳಿ ಮಾಡತಕ್ಕ ಸಂದರ್ಭದಲ್ಲಿ ಐ ಎನ್ ಟಿ ಯು ಸಿ ಯ ಬಗ್ಗೆ ಕಾರ್ಯದರ್ಶಿಯಾದ ಪುರುಶೋತ್ತಮ ಎನ್ನುವವರಿಗೆ ಕೋದಂಡರಾಮ್ ಎನ್ನುವವರು ಕಪಾಳಕ್ಕೆ ಹೊಡೆದರು ಎನ್ನತಕ್ಕ ವಿಷಯ ಪ್ರಸ್ತಾಪಕ್ಕೆ ಬಂತು, ಆಗ ಆದರ ಬಗ್ಗೆ ಸುಮಾರು ೨-೩ ಗಂಟೆಗಳ ವಿಂಚಿನ ವೇಗದಲ್ಲಿ ಸತ್ಯಾಗ್ರಹ ಮಾಡಿದರು. ನಮ್ಮ ಬಸ್‌ನ ಸಾರಿಗೆ ವ್ಯವಸ್ಥೆಯೆಲ್ಲಾ ಅವ್ಯವಸ್ಥೆಯಾಯಿತು. ಆಗ ನಮ್ಮ ನಿಗಮದ ಅಧ್ಯಕ್ಷರು ಎಲ್ಲರನ್ನೂ ಕರೆಯಿಸಿ ಸಮಾಲೋಚನೆ ಮಾಡಿ ಸರಿಪಡಿಸಿದರು. ಇಂತಹ ಒಂದು ಭಿನ್ನಾಭಿಪ್ರಾಯತಕ್ಕ ಸಂದರ್ಭದಲ್ಲಿ ಇವರು ಸ್ವಲ್ಪ ದಿವಸದ ರಜದ ಮೇಲೆ ಆಂಧ್ರಪ್ರದೇಶಕ್ಕೆ ಹೋಗಿ ವಿಜಯವಾಡದಿಂದ ವಾಪಸ್ಸು ಬರುವಾಗ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ನಮ್ಮ ಸರ್ಕಾರೀ ಬಸ್‌ನ್ನೇ ಡ್ರೈ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಆ ಬಸ್ಸಿನಲ್ಲಿ ಸುಮಾರು ೫೦-೬೦ ಜನ ಇದ್ದರು. ಅಷ್ಟು ಪ್ರಯಾಣಿಕರನ್ನು ತೆಗೆದುಕೊಂಡು ಬರತಕ್ಕ ಸಂದರ್ಭದಲ್ಲಿ ಎದುರುಗಡೆಯಿಂದ ಲಾರಿ ಬಂದು ಡಿಕ್ಕಿ ಹೊಡೆದಾಗ ನಮ್ಮ ಬಸ್ಸಿನ ೪ ಪೆನಲ್‌ಗಳು ಬಲಗಡೆಯ ಅಲ್ಯುಮಿನಿಯಂ ಕಿತ್ತು ಹೋದವು ಆದರೆ ಸುದೈವದಿಂದ ಅವತ್ತು ಆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದವರಿಗೆ ಯಾರಿಗೂ ಹಾನಿಯಾಗಲಿಲ್ಲ. ಆದರೆ ಈ ವಿಚಾರವನ್ನು ಯಾರಿಗೂ ತಿಳಿಸಬಾರದು ಇದರ ಬಗ್ಗೆ ಡ್ರೈವರ್ ಕಂಡಕ್ಟರ್‌ರವರಿಂದ ಹೇಳಿಕೆಯನ್ನು ಪಡೆದುಕೊಳ್ಳಬಾರದು ಎನ್ನತಕ್ಕ ಪ್ರಸ್ತಾಪ ಕೂಡ ಆಯಿತು...

ಶ್ರೀ ಎಸ್. ಬಂಗಾರಪ್ಪ.—ಯಾವತ್ತು ಆಗಿದ್ದು ಇದು ? ಡೇಟ್ ಏನು ?

ಶ್ರೀ ಎಂ.ಪಿ. ಪ್ರಕಾಶ್.—ನಿನ್ನೆ ಆಗಸ್ಟ್ ೧೯ನೇ ತಾರೀಖಿನಂದು ಅವರು ನೆಲ್ಲೂರಿನಿಂದ ಅವರು ರಜದ ಮೇಲೆ ಹೋಗಿ ವಾಪಸ್ಸು ಬರುತ್ತಿದ್ದರು. ಬರುತ್ತಿರುವಾಗ ಬಸ್ಸನ್ನು ಓಡಿಸತಕ್ಕ ಅಧಿಕಾರ ಅವರಿಗೆ ಇಲ್ಲ, ಆದೂ ಪ್ರಯಾಣಿಕರು ತುಂಬಿರತಕ್ಕ ಬಸ್‌ನ್ನು ನಡೆಸತಕ್ಕ ಅಧಿಕಾರ ಕಾನೂನು ಪ್ರಕಾರವಾಗಿ ಡ್ರೈವರ್‌ಗೆ ಮಾತ್ರ ಇರತಕ್ಕದ್ದು. ಹೀಗಿದ್ದಾಗ್ಯೂ ಸಹ ಅವರು ಅಧಿಕಾರ ವಿಲ್ಲದ ಬಸ್ಸನ್ನು ಓಡಿಸತಕ್ಕ ಕ್ರಮವನ್ನು ಮಾಡಿದ್ದಾರೆ. ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲೂ ಕೂಡ ಚರ್ಚೆಗೆ ಬಂತು. ಮಾನ್ಯ ಶ್ರೀ ನಾಗೇಗೌಡರವರು ಇದನ್ನು ಪ್ರಸ್ತಾಪ ಮಾಡಿ ನಿಮ್ಮಲ್ಲಿರತಕ್ಕ ಐ ಪಿ ಎಸ್ ಅಧಿಕಾರಿಯವರು ಕಾನೂನಿನ ವ್ಯಾಪ್ತಿ ಮೀರಿ ನಡೆದುಕೊಳ್ಳುತ್ತಿದ್ದಾರೆ ಎನ್ನತಕ್ಕದ್ದರ ಬಗ್ಗೆ ಅವರು ಹೇಳಿದ್ದರು. ಮಾನ್ಯ ಶ್ರೀ ನಾಗೇಗೌಡರವರು ವಿಧಾನ ಪರಿಷತ್ತಿನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಿದ ಮೆಲೆ ಪತ್ರಿಕೆಗಳಲ್ಲಿ ಕೂಡ ಇದು ಬಂತು. ಇದರ ಬಗ್ಗೆ ಕಾರ್ಮಿಕ ಮುಖಂಡರು ಸರ್ಕಾರಕ್ಕೆ ಮನವಿಯನ್ನು ಅರ್ಪಿಸಿದ್ದಾರೆ. ಅದಕ್ಕೆ ನಮ್ಮ ನಿಗಮದ ಅಧ್ಯಕ್ಷರು ಉತ್ತರವನ್ನು ಬರೆದಿರತಕ್ಕದ್ದು ಕೂಡ ಇದೆ ಅದರ ಮೆಮೋ ಕೂಡ ಇದೆ ಅದನ್ನು ಬೇಕಾದರೆ ಸದಸ್ಯರಿಗೆ ತೋರಿಸುತ್ತೇನೆ. ಇಲ್ಲಿ ಬಂದಿರತಕ್ಕ ಸಮಸ್ಯೆ ಏನೆಂದರೆ ಪ್ರಯಾಣಿಕರಿಂದ ತುಂಬಿರತಕ್ಕ ಬಸ್ಸನ್ನು ಇವರು ಓಡಿಸಿದಾಗ ಸಂಬಂಧಪಟ್ಟ ಕಂಡಕ್ಟರ್ ಮತ್ತು ಡ್ರೈವರ್ ಏತಕ್ಕೆ ಫಿರ್ಯಾದಿ ಕೊಡಲಿಲ್ಲ ? ಒಂದು ವೇಳೆ ಫಿರ್ಯಾದಿ ಕೊಡದೇ ಇದ್ದರೆ ನಮ್ಮ ಬಸ್ಸಿಗೆ ಆಗಿರತಕ್ಕ ಹಾನಿಯನ್ನು ತುಂಬಿಕೊಡತಕ್ಕ ಜವಾಬ್ದಾರಿಯನ್ನು ಆ ಬಸ್ಸಿನ ಚಾಲಕ ನಿರ್ವಹಿಸಬೇಕಾಗುತ್ತದೆ. ನಿಯಮಗಳ ಪ್ರಕಾರವಾಗಿ ಅವನು ಶಿಕ್ಷೆಗೆ ಅರ್ಹನಾಗುತ್ತಾನೆ. ಆದುದರಿಂದ ಬಸ್ಸಿನ ಚಾಲಕರು, ನಿರ್ವಾಹಕರು ಇದರ ಬಗ್ಗೆ ಏತಕ್ಕೆ ಹೇಳಿಕೆಯನ್ನು ತೆಗೆದುಕೊಳ್ಳಲಿಲ್ಲ ಎನ್ನತಕ್ಕದ್ದು ಮುಖ್ಯವಾಗಿದೆ. ಆದರೆ ಈ ಎಲ್ಲಾ ವಿಷಯಗಳನ್ನೂ ಮುಚ್ಚಿಡತಕ್ಕ ಪ್ರಯತ್ನವಾಗಿದೆ. ಅವರು ರಜದ ಮೆಲೆ ಹೋಗಿರತಕ್ಕದ್ದನ್ನು ಬೇರೆ ತರಹ ದೃಷ್ಟಿಯಲ್ಲಿ ತೆಗೆದುಕೊಂಡು ಕನಕಪುರ ಚುನಾವಣೆಗೆ ಕಲ್ಪಿಸಿ ಅಲ್ಲಿ ೧೧೧೦ ಜನ ಕೆಲಸ ಮಾಡಿದರು ಎಂದು ಹೇಳತಕ್ಕದ್ದು ಸರಿಯಲ್ಲ. ಕನಕಪುರದವರು ಕೇವಲ ೧೫–೨೦ ಜನ ಮಾತ್ರ ಇಂತಹವರು ಇದ್ದಾರೆ. ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಇದರ ಬಗ್ಗೆ ೧೯೮೦ನೇ ಇಸ್ವಿಯಲ್ಲಿಯೇ ಹಿಂದಿನ ಸರ್ಕಾರದವರು ಮಾಡಿದ್ದಾರೆ, ಅದನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣನೆ ಮಾಡಬೆಕು ಎನ್ನತಕ್ಕದ್ದನ್ನು ಪ್ರಸ್ತಾಪ ಮಾಡಿದ್ದಾರೆ. ಈಗಲೂ ಕೂಡ ಹೇಳುತ್ತಿದ್ದೇನೆ ಅದರ ಬಗ್ಗೆ ಅಂತಿಮವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲ, ಆ ದೃಷ್ಟಿಯಿಂದ ಇಲ್ಲಿ ನಡೆದಿರತಕ್ಕ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಹೇಳಿಕೆ ಕೊಟ್ಟಿರತಕ್ಕದರ ಪ್ರಕಾರವಾಗಿ ಒಬ್ಬ ಐ ಪಿ ಎಸ್ ಅಧಿಕಾರಿ ಕಾನೂನು ವಿರೋಧ ತಪ್ಪು ಮಾಡಿದ್ದರೆ ಕಾನೂನಿನ ಪ್ರಕಾರವಾಗಿ ಶಿಕ್ಷೆಗೆ ಒಳಪಡಲೇ ಬೇಕಾಗುತ್ತದೆ. ಕಾನೂನಿನ ಮುಂದೆ ಎಲ್ಲರೂ ಒಂದೇ. ಬಸ್ಸಿನ ಚಾಲಕನಿದ್ದರೂ ಸಹ ಅವರು ಏತಕ್ಕೆ ಬಸ್ಸನ್ನು ತೆಗೆದುಕೊಂಡು ಹೋದರು ? ಒಂದು ವೇಳೆ ತೆಗೆದುಕೊಂಡು ಹೋಗಿದ್ದರೆ ಅವರ ಮೇಲೆ ಕೇಸ್ ಹಾಕಿದ್ದಾರೆಯೇ ? ಎನ್ನತಕ್ಕ ಪ್ರಶ್ನೆ ಕೂಡ ಬರುತ್ತದೆ. ಇದರ ಮೆಲೆ ಕ್ರಮವನ್ನು ತೆಗೆದುಕೊಳ್ಳತಕ್ಕ ಜವಾಬ್ದಾರಿ ಕೆ ಎಸ್ ಆರ್ ಟಿ ಸಿ ಮತ್ತು ಪೋಲೀಸ್ ನವರಿಗೆ ಬಿಟ್ಟಿರತಕ್ಕ ಜವಾಬ್ದಾರಿಯಾಗಿದೆ. ಎರಡನೆಯ ವಿಚಾರ ಒಂದು ವೇಳೆ ಅವರು ಟ್ರೇಡ್ ಯೂನಿಯನ್ನಿನವರಾಗಲೀ ಮತ್ತೊಬ್ಬರಿಗೇ ಆಗಲಿ ಹೊಡೆದಿದ್ದರೂ ಸಹ ಕಾನೂನಿನ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದು ರಾಜ್ಯ ಸರ್ಕಾರ ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ವಿಚಾರ. ಆದರೆ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಕೋದಂಡರಾಮಯ್ಯನವರು ಐ ಪಿ ಎಸ್ ಅಧಿಕಾರಿಯಾಗಿದ್ದಾರೆ ಆದುದರಿಂದ ಈ ಎಲ್ಲಾ ವಿಷಯವನ್ನು ಮುಚ್ಚಿಡಬೇಕು ಎನ್ನತಕ್ಕದ್ದು ಇಲ್ಲ. ಅದರ ಬಗ್ಗೆ ಭಿನ್ನಾಭಿಪ್ರಾಯ ಯಾರದೂ ಇಲ್ಲ. ಆದರೆ ಇಲ್ಲಿ ಇರತಕ್ಕ ಮುಖ್ಯವಾದ ವಿಷಯವೆನೆಂದರೆ ಕೋದಂಡರಾಮಯ್ಯನವರು ಮುಖ್ಯಮಂತ್ರಿಗಳವರ ಆದೇಶವನ್ನು ಧಿಕ್ಕರಿಸಿದರು ಎನ್ನತಕ್ಕ ಒಂದೇ ಕಾರಣಕ್ಕಾಗಿ ಅವರನ್ನು ರಜದ ಮೇಲೆ ಹೋಗಿ ಎಂದು ಕಳುಹಿಸಿದ್ದಾರೆ ಎನ್ನುವುದೇ ಇಲ್ಲಿ ಪ್ರಶ್ನೆ ಇರುವುದು. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲೂ ಸಹ ಎಷ್ಟೋ ಸಾರಿ ಅಧಿಕಾರಿಗಳನ್ನು ರಜದ ಮೇಲೆ ಕಳುಹಿಸತಕ್ಕ ಪರಿಪಾಠವಿದೆ. ಇಲ್ಲಿ ಕೋದಂಡರಾಮಯ್ಯನವರು ಮಾನ್ಯ ಮುಖ್ಯಮಂತ್ರಿಗಳವರ ಆದೇಶವನ್ನು ಪರಿಪಾಲನೆ ಮಾಡದೇ ಇದ್ದುದರಿಂದ ಅವರನ್ನು ರಜದ ಮೇಲೆ ಹೋಗುವುದಕ್ಕೆ ಮುಖ್ಯಮಂತ್ರಿಗಳವರು ಬಾಯಿ ಮಾತಿನ ಆದೇಶವನ್ನು ಕೊಟ್ಟಿದ್ದಾರೆ...

ಅಧ್ಯಕ್ಷರು.—ನೀವು ಭಾಷಣವನ್ನೇ ಶುರು ಮಾಡಿ ಬಿಟ್ಟಿರಿ. ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳವರಿಗೆ ಪೋಲೀಸ್ ಇಲಾಖೆ ಸಂಬಂಧ ಪಟ್ಟಿರುವುದರಿಂದ ಈ ಕೋದಂಡರಾಮಯ್ಯನವರು ಐ ಪಿ ಎಸ್ ಅಧಿಕಾರಿಯಾಗಿರುವುದರಿಂದ ಅವರ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಗಳವರಿಗೆ ಸಂಬಂಧಪಟ್ಟಿರುತ್ತದೆ. ಕೆಲವೊಂದು ವಿಷಯಗಳು ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿಲ್ಲದೇ ಇರಬಹುದು, ಮಾನ್ಯ ಮುಖ್ಯಮಂತ್ರಿಗಳವರು ಇವರಿಗೆ ಗೊತ್ತಿಲ್ಲದ ಹಾಗೆ ಆದೇಶವನ್ನು ಕೊಟ್ಟಿರಬಹುದು. ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರವಾಗಿ ಆದೆ ಶ ಕೊಟ್ಟಿದ್ದಾರೆ ಎನ್ನತಕ್ಕದ್ದು ಬಂದಿದೆ ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಇಲ್ಲಿಯೇ ಇರುವುದರಿಂದ ಅವರಿಂದ ಇದರ ಬಗ್ಗೆ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್.—ನನಗೆ ಗೊತ್ತಿರುವ ಪ್ರಕಾರವಾಗಿ ಯಾವುದೇ ತರಹವಾದ ಆದೇಶವನ್ನೂ ಅವರು ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳವರು ಎಲ್ಲಾ ಆದೇಶವನ್ನೂ ನಿಮಗೆ ಹೇಳಿಯೇ ಕೊಡುತ್ತಾರೆಯೇ ?

ಶ್ರೀ ಎಂ. ರಘುಪತಿ.—ನಮ್ಮ ನಮ್ಮ ಡಿಪಾರ್ಟ್‌ಮೆಂಟಿನ ಬಗ್ಗೆ ನಮ್ಮಗಳನ್ನು ಕೇಳಿ ಆದೇಶ ಕೊಡುತ್ತಾರೆ...

ಶ್ರೀ ಎಂ.ಪಿ. ಪ್ರಕಾಶ್.—ತಾವೇ ಸೃಷ್ಟಿ ಮಾಡಿರತಕ್ಕ ಘಟನೆಯು ಸುಳಿಯಲ್ಲಿ ಸಿಕ್ಕಿ ಹಾಕಿ ಕೊಂಡಿರತಕ್ಕ ಒಬ್ಬ ಅಧಿಕಾರಿ, ಕಾರ್ಮಿಕ ಸಂಘದ ಒಬ್ಬ ಪದಾಧಿಕಾರಿಯು ಕಪಾಳಕ್ಕೆ ಹೊಡೆದಿರತಕ್ಕ ಸನ್ನಿವೇಶದಲ್ಲಿ ಪೇಚಿನಿಂದ ಸಿಕ್ಕಿಹಾಕಿಕೊಂಡಿರತಕ್ಕವರು ಆದರಿಂದ ತಪ್ಪಿಸಿಕೊಳ್ಳಲಿಕ್ಕೆ ಮಾಡಿಕೊಂಡ ರೀತಿಯಲ್ಲಿ ವ್ಯವಹಾರ ನಡೆದಿದೆ...

೧೨-೩೦ ಪಿ.ಎಂ.

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ಮುಖ್ಯ ಮಂತ್ರಿಗಳ ಹೆಸರನ್ನು ಪ್ರಸ್ತಾಪಿಸುವುದಾಗಲಿ, ಅವರು ಆದೇಶ ಕಳುಹಿಸಿಕೊಟ್ಟಿರತಕ್ಕದ್ದಾಗಲಿ ಸತ್ಯಕ್ಕೆ ದೂರವಾದುದು.

ಶ್ರೀ ಧರ್ಮಸಿಂಗ್.—ಮುಖ್ಯ ಮಂತ್ರಿಗಳು ಸಭೆಯಲ್ಲಿರುವುದರಿಂದ ಬಂಗಾರಪ್ಪನವರು ಅವರನ್ನು ಕೇಳುತ್ತಿದ್ದಾರೆ.

ಅಧ್ಯಕ್ಷರು.—ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಿದ್ದಾರೆ ಅಲ್ಲವೇ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪ್ರಕಾಶ್ ಅವರಿಗೆ ಆ ವಿಚಾರ ಗೊತ್ತಿಲ್ಲ. ಮುಖ್ಯ ಮಂತ್ರಿಗಳು ಆರೀತಿ ಆದೇಶ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ. ಬಾಕಿ ಪ್ರಶ್ನೆಯನ್ನು ನಾನು ಎತ್ತುವುದಕ್ಕೆ ಹೋಗುವುದಿಲ್ಲ. ಸಚಿವರು ಉತ್ತರಿಸುವಾಗ ನಾನು ಸೂಕ್ಷ್ಮವಾಗಿ ಗಮನಿಸಿದೆ, ಯಾವುದೋ ಒಂದು ಪೇಚಿಗೆ ಈ ಅಧಿಕಾರಿ ಸಿಕ್ಕಿ ಹಾಕಿಕೊಂಡದ್ದರಿಂದ ಮತ್ತು ಅದರಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಈ ರೀತಿ ಆಗುತ್ತಿದೆ ಎಂದು ನೇರವಾಗಿ ಅಧಿಕಾರಿಗಳ ಮೇಲೆ ಆಪಾದನೆ ಮಾಡಿದರು, ಸಚಿವರ ಮೇಲೆ ಅಥವಾ ಸದಸ್ಯರ ಮೇಲೆ ಆಪಾದನೆ ಮಾಡಿದ್ದರೆ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ಅಧಿಕಾರಿಗಳ ಮೇಲೆ ಈ ರೀತಿ ಆಪಾದನೆ ಮಾಡುವುದು ಸದನಕ್ಕೆ ತಕ್ಕದ್ದಲ್ಲ. ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಅವಕಾಶ ಇಲ್ಲ. ಆ ದಾಖಲೆಯನ್ನು ತಾವು ತರಿಸಿ ನೋಡಬೇಕು. ಅವರು ನೇರವಾಗಿ ಅಧಿಕಾರಿಯ ಮೇಲೆ ಆಪಾದನೆ ಮಾಡುವುದರಿಂದ ಮುಂದೆ ನಡೆಯುವ ವಿಚಾರಣೆಯ ಮೇಲೆ ಅದು ಪರಿಣಾಮ ಬೀರುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ನಾನು ಹೆಚ್ಚಿಗೆ ಪ್ರಸ್ತಾಪ ಮಾಡದೆ ಏತಕ್ಕೆ ಹೇಳಿದೆ ಎಂದರೆ, ಹಿಂದೆ ಈ ಸದನದಲ್ಲಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡುವಾಗ ಆತ ದಕ್ಷ ಅಧಿಕಾರಿ ಎಂಬ ಮಾತನ್ನು ಹೇಳಿದ್ದೇನೆ. ದಕ್ಷ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿ ಮೀರಿ ನಡೆದುಕೊಳ್ಳಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಹೇಳಿದ್ದನ್ನು ಎಲ್ಲರೂ ಕೇಳಿದ್ದಾರೆ. ನಾನು ಕೂಡ ಯೂನಿಯನ್ ಮೂಲಕ ಕೆ.ಎಸ್.ಆರ್.ಟಿ.ಸಿ.ಗೆ ಸಂಬಂಧಪಟ್ಟವನು. ನಾನು ಕೋದಂಡ

ರಾಮಯ್ಯನವರನ್ನು ಬಲ್ಲೆ. ಅವರು ಒಳ್ಳೆಯ ಅಧಿಕಾರಿ ಎಂದು ಹೇಳಿದಿರಿ. ಬಹಳ ಒಳ್ಳೆಯ ಅಧಿಕಾರಿ ಎಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಈಗ ಮೊಯಿಲಿಯವರು ಹೇಳಿದ್ದು ಬಹಳ ಗಹನವಾದ ಪ್ರಶ್ನೆ. ಅವರು ಐ. ಪಿ. ಎಸ್. ಅಧಿಕಾರಿಯಾಗಿ ಏನು ತಪ್ಪು ಮಾಡಿರಬಹುದು? ಆ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲು ಅವಕಾಶ ಇಲ್ಲ. ಬಂಗಾರಪ್ಪನವರು ಹೇಳಿದರು, ೩೦೦ ಜನರನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ ಎಂದಾಗ ಕೋದಂಡರಾಮಯ್ಯನವರು ಕಾನೂನು ರೀತಿಯಲ್ಲಿ ತೆಗೆದುಕೊಳ್ಳುವುದು ಸರಿಯಲ್ಲ ಎಂದರು. ಅದಕ್ಕೆ ಮುಖ್ಯ ಮಂತ್ರಿಗಳು ಬೇರೆ ರೀತಿಯಲ್ಲಿ ಆದೇಶ ಕೊಟ್ಟು ಇವರಿಗೆ ರಜ ತೆಗೆದುಕೊಳ್ಳಿ ಎಂದು ಹೇಳಿರುವುದು ಇರತಕ್ಕ ವಿಷಯ. ಅಷ್ಟೇ ಸೀಮಿತವಾಗಿದ್ದರೆ ಸರಿಯಾಗಿತ್ತು. ಆದರೆ ಅವನ್ನು ವಿಸ್ತರಣೆ ಮಾಡಿ ಪ್ರಕಾಶ್‌ರವರು ಹೇಳಿರುವುದನ್ನು ಕೇಳಿದರೆ ಬೇರೆ ಕಾರಣಕ್ಕಾಗಿ ರಜ ತೆಗೆದುಕೊಂಡಿರುವುದು ಎಂದು ಭಾಸವಾಗುತ್ತದೆ. ಅವರು ಮಾತನಾಡಿದ ರೀತಿ ನೋಡಿದರೆ ಬೇಜವಾಬ್ದಾರಿತನದ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದು ಇನ್ನೂ ಪರಿಶೀಲನೆಯಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಅಸೆಂಬ್ಲಿಯಲ್ಲಿ ಬೇಜವಾಬ್ದಾರಿತನದ ಅಧಿಕಾರಿ ಎಂದರೆ ಯಾವ ಅಧಿಕಾರಿ ತಾನೆ ಸರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ? ಯಾರಿಗೋ ಕಪಾಳಕ್ಕೆ ಹೊಡೆದರು, ಬಸ್ ತರಿಸಿದರು ಎಂಬ ಎರಡು ಪ್ರಸ್ತಾಪಗಳೇನಿವೆ ಅವನ್ನು ಪ್ರಸ್ತಾಪ ಮಾಡುವುದು ಅನುಚಿತ. ಹಾಗೆ ಮಾಡುವುದರಿಂದ ನೀವೇ ಅಧಿಕಾರಿಗಳಿಗೆ ತೊಂದರೆ ಮಾಡಿದಂತಾಗುತ್ತದೆ. ಮಂತ್ರಿಗಳು ರಕ್ಷಣೆ ಕೊಡದೆ ತೊಂದರೆ ಮಾಡಿದಂತಾಗುತ್ತದೆ. ಅವರನ್ನು ಧಕ್ಷ ಅಧಿಕಾರಿಗಳು ಎಂದು ನೀವೇ ಹೇಳುತ್ತೀರಿ. ಇದರಲ್ಲಿ ಏನೋ ಒಳಮರ್ಮ ಇಟ್ಟುಕೊಂಡು ಹೇಳುತ್ತೀರೆಂದು ಭಾಸವಾಗುತ್ತದೆ. ಇದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಮುಖ್ಯ ಮಂತ್ರಿಗಳು ಏನಾದರೂ ಹೇಳುವುದು ಇದ್ದರೆ ಹೇಳಲಿ.

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ಯಾವ ಒಳಮರ್ಮವೂ ಇಲ್ಲ. ಒಳಮರ್ಮ ಮಾಡಬೇಕೆಂಬ ಜನರು ಈ ಮಾತನ್ನು ಹೇಳುತ್ತಾರೆಯೆ? ಕಳೆದ ೨–೩ ದಿನಗಳಿಂದ ಬೇರೆ ಬೇರೆ ಪತ್ರಿಕೆಗಳಲ್ಲಿ ಕನಕಪುರ ಚುನಾವಣೆಯಲ್ಲಿ ಇವರು ಸಹಾಯ ಮಾಡಿದ್ದಾರೆ, ಆದ್ದರಿಂದ ಮುಖ್ಯ ಮಂತ್ರಿಗಳು ಅವರನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ಈ ಅಧಿಕಾರಿ ಅಡ್ಡ ಬಂದಿದ್ದರಿಂದ ಈ ರೀತಿಯಾಗಿದೆ ಎಂದು ಬಂದಿದೆ. ಇದರ ಹಿನ್ನೆಲೆಯಲ್ಲಿ ಹೇಳಬೇಕಾದುದು ಇಷ್ಟೆ. ೩೦೦ ಜನರನ್ನು ಸೇರಿಸಿಕೊಳ್ಳಬೇಕೆಂದು ಇಲ್ಲ. ಅದರಲ್ಲಿ ಯಾರು ಯಾರು ಕೋರ್ಟಿಗೆ ಹೋಗಿದ್ದಾರೆ ಅವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸುತ್ತೇವೆಂದು ಹೇಳಿದ್ದೇನೆ. ಆಡಳಿತ ವರ್ಗದವರೊಡನೆ ಪ್ರಸ್ತಾಪ ಮಾಡಿ ಅವರ ಹಕ್ಕಿಗೆ ಚ್ಯುತಿ ಬಾರದ ರೀತಿ ಮಾಡಬೆ ಕೆಂದು ಮಾಡಿದ್ದೇವೆ. ಈ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಕೃಷ್ಣನ್‌ರವರು ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಯಾವ ರಾಜಕೀಯ ಮಾಡಿಲ್ಲ, ಕನಕಪುರದ ವಿಷಯ ಹೇಳಿದ್ದರೆ ಸಂತೋಷ ಪಡುತ್ತಿದ್ದೆ ಎಂದರು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕನಕಪುರದ ವಿಷಯವನ್ನು ಹೇಳಲೇ ಇಲ್ಲ. ಅದರ ಬಗ್ಗೆ ನಾನು ಮಾತನಾಡಲೇ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ತಾವು ಹಿರಿಯ ಸದಸ್ಯರಾಗಿ ರಾಜಕೀಯ ವಿಷಯ ಪ್ರಸ್ತಾಪ ಮಾಡುವುದು ಸರಿಯಲ್ಲ. ನೀವು ಮಾನವೀಯ ದೃಷ್ಟಿಯಿಂದ ಅವರನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪ ಮಾಡಿದ್ದರೆ ಮೆಚ್ಚಬಹುದಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಬೇರೆ ದಾರಿಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕನಕಪುರದ ವಿಷಯವನ್ನು ನಾನು ಪ್ರಸ್ತಾಪ ಮಾಡಲೇ ಇಲ್ಲ. ಕಾರ್ಮಿಕರು ಬಂದು ಕೆಲಸ ಮಾಡಲಿ ಸಂತೋಷ. ಇಲ್ಲಿ ಪ್ರಶ್ನೆ ಇರುವುದು ಒಂದೇ. ಡೈರೆಕ್ಷನ್ ಕೊಟ್ಟವರನ್ನು ಬೇರೆ ಕಡೆಗೆ ಕಳುಹಿಸಿ ಎಂದು ಹೇಳಿದ್ದೀರಾ? ಕನಕಪುರದ ಪ್ರಶ್ನೆಯನ್ನು ನಾನು ಎತ್ತಲೇ ಇಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಅಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಅದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ.

ಶ್ರೀ ಎಂ. ಪಿ. ಪ್ರಕಾಶ್.—ನೀವು ಅದನ್ನು ಸಮರ್ಥಿಸಬೇಕು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಪೂರ್ತಿ ಸಮರ್ಥನೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈ ಸಭೆಯ ಮುಂದೆ ವ್ಯಕ್ತ ಮಾಡತಕ್ಕ ವಿಚಾರ ಸ್ವಲ್ಪ ಬೇರೆ ದೃಷ್ಟಿಯಿಂದ ತಿಳಿಸಿನೇ ರೂಲ್ ಪ್ರಕಾರ ಎಲ್ಲ ವಿಚಾರವನ್ನು ಪ್ರಸ್ತಾಪ ಮಾಡಬಹುದೋ ಅಥವಾ ಅದಕ್ಕೇನಾದರೂ ಇತಿಮಿತಿ ಇದೆಯೋ? ಇದೊಂದು ಸರ್ಕಾರ, ಸರ್ಕಾರದ ಮಟ್ಟದಲ್ಲಿ ಅನೇಕ ನಿರ್ಣಯಗಳನ್ನು ಮಾಡುತ್ತೇವೆ. ಯಾವುದೋ ಕಾರಣಕ್ಕಾಗಿ ಒಬ್ಬ ಅಧಿಕಾರಿಯನ್ನು ಬದಲಾವಣೆ ಮಾಡುತ್ತೇವೆ, ಒಬ್ಬ ಅಧಿಕಾರಿಯನ್ನು ಅಮಾನತ್ತಿನಲ್ಲಿಡುತ್ತೇವೆ, ಅಧಿಕಾರಿಯನ್ನು ಅಧಿಕಾರದಿಂದ ತೆಗೆದು ಹಾಕುತ್ತೇವೆ. ಅದು ಸರ್ಕಾರಕ್ಕೆ ಸಂಬಂಧಪಟ್ಟದ್ದು. ಅದನ್ನು ಚರ್ಚಿಸತಕ್ಕ ಹಕ್ಕು ನನಗೆ ಗೊತ್ತಿದ್ದ ಮಟ್ಟಿಗೆ ಈ ಸದನಕ್ಕೆ ಇಲ್ಲ. ನಾವು ಏನೇ ನಿರ್ಣಯಗಳನ್ನು ತೆಗೆದು ಕೊಳ್ಳಲಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆಗೆದುಕೊಳ್ಳುತ್ತೇವೆ. ಮತ್ತು ಸೇವಾ ನಿಯಮಗಳಿಗನುಗುಣವಾಗಿ ಅಧಿಕಾರಿ ದೊಡ್ಡವನಿರಲಿ, ಸಣ್ಣವನಿರಲಿ ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಹಾಗೆ ಕ್ರಮ ತೆಗೆದುಕೊಂಡ ತಕ್ಷಣ ಅಧಿಕಾರಿ ದೊಡ್ಡವನಿದ್ದರೆ ಅದು ನಿಮ್ಮ ಕಣ್ಣಿಗೆ ಕಾಣುತ್ತದೆ. ದೈನಂದಿನ ವ್ಯವಹಾರದ ಬಗ್ಗೆ ಈ ಮನೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ವಿಚಾರ ತಂದು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ರಾಜಕೀಯವನ್ನು ಇಂಜೆಕ್ಟ್ ಮಾಡಿ ಮಂತ್ರಿಗಳ ಹೆಸರು ತರುವುದು ನಿಮಗೆ ಪರಿಪಾಠವಾಗಿದೆ. ಮೊನ್ನೆ ಗೃಪ ಮಂತ್ರಿಗಳ ಹೆಸರು ತಂದರು, ಇವತ್ತು ನನ್ನ ಹೆಸರು ತಂದಿದ್ದಾರೆ. ಟೀಕೆ ಮಾಡುವುದಾದರೆ ನೇರವಾಗಿ ಮಾಡಿ. ಏನು ತಪ್ಪು ಮಾಡಿದ್ದೇವೆಂಬುದನ್ನು ತೋರಿಸಿ. ಒಬ್ಬ ಅಧಿಕಾರಿಯನ್ನು ರಜೆ ಮೇಲೆ ಕಳುಹಿಸತಕ್ಕ ಅಧಿಕಾರ ಸರ್ಕಾರಕ್ಕೆ ಇಲ್ಲವೆ? ಈ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಅಧಿಕಾರಿಗಳಿಂದ ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕೆಂಬುದು ನಮಗೆ ಗೊತ್ತು.

ಆ ಅಧಿಕಾರಿ ಬಹಳ ದಕ್ಷ, ಹಾಗೆ. ಸಾರಿಗೆ ನಿಗಮದಲ್ಲಿ ಆತ ಒಂದು ದೊಡ್ಡ ಹುದ್ದೆಯಲ್ಲಿದ್ದಾರೆ. ಬಹಳ ಜವಾಬ್ದಾರಿ ಹುದ್ದೆಯಲ್ಲಿದ್ದಾರೆ. ಮೂರು ನಾಲ್ಕು ದಿನಗಳಿಂದ ಸಾರಿಗೆ ನಿಗಮದ ಸಿಬ್ಬಂದಿಯವರು ಹರತಾಳ ಮಾಡುತ್ತಿದ್ದರು, ಯಾವುದೇ ಒಂದು ಮುಷ್ಕರವಾಗಲೀ, ಪ್ರತಿಭಟನೆಯಾಗಲೀ ಆಗುವಾಗ ಕೂಗಾಡತಕ್ಕದ್ದು ಸ್ವಾಭಾವಿಕ. ಅರೀತಿ ಅವರು ಕೂಗಾಡುತ್ತಿದ್ದರು. ಆಗ ಇದ್ದಕ್ಕಿದ್ದಹಾಗೆ, ಆಫೀಸಿಗೆ ಹೋಗುವಾಗ ಒಬ್ಬ ಅಧಿಕಾರಿ ಅವನು ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ ಹೋಗಿ ಕಾರ್ಮಿಕರ ಕಪಾಳಕ್ಕೆ ಹೊಡೆದರೆ ಅವರ ಕರ್ತವ್ಯ ಮಾಡಿದಂತಾಗುತ್ತದೆಯೆ?

ಶ್ರೀ ಕೆ.ಹೆಚ್. ರಂಗನಾಥ್.—ಅದನ್ನು ತಾವೂ ನೋಡಿಲ್ಲ, ನಾವೂ ನೋಡಿಲ್ಲ. ಯಾರಾದರೂ ಹೇಳಿದ್ದನ್ನು ತಾವು ಕೇಳಿರಬಹುದು, ಅವರು ಕಪಾಳಕ್ಕೆ ಹೊಡೆದಿದ್ದನ್ನು ತಾವು ನೋಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ನೋಡಬೇಕಾಗಿಲ್ಲ. ಗೊತ್ತಾಗುತ್ತದೆ. ೩೦೦ ಜನ ನೌಕರಿ ಕಳೆದುಕೊಂಡವರು ಕನಕಪುರದಲ್ಲಿ ಚುನಾವಣೆಗೆ ಕೆಲಸ ಮಾಡಿದ್ದನ್ನು ಮಾನ್ಯ ರಂಗನಾಥ್ ಅವರು ನೋಡಿದ್ದಾರೆಯೇ?

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿರುವಾಗ ಈ ರೀತಿ ಮಾಡುವುದು ಸರಿಯೇ?

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಮುಖ್ಯಮಂತ್ರಿಯವರು ಹೇಳುವುದನ್ನು ಪೊಟಕು ಮಾಡ ಬೇಕು ಎಂಬ ದೃಷ್ಟಿಯಿಂದ ನಾನು ಇದನ್ನು ಎತ್ತಿಲ್ಲ. ಸಾರಿಗೆ ಸಚಿವರು ಹೇಳುವಾಗಲೂ ನಾನು ಅಡ್ಡ ಬಾಯಿ ಹಾಕಲಿಲ್ಲ. ಆದರೆ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುವಾಗ ಪೀಟಿಕೆಯಲ್ಲಿ ಏನು ಹೇಳಿದರು ಎಂದರೆ ಸರ್ಕಾರದ ದೈನಂದಿನ ವ್ಯವಹಾರದ ಬಗ್ಗೆ ಕೈಹಾಕುವುದಕ್ಕೆ ಈ ಸಭೆಗೆ ಹಕ್ಕಿಲ್ಲ ಎಂಬ ಮಾತನ್ನು ಹೇಳಿದರು. ಆಗ ಕೂಡ ನಾವು ಅಡ್ಡಬಾಯಿ ಹಾಕಲಿಲ್ಲ. ಆದರೆ ಹರತಾಳ ನಡೆಯುತ್ತಿದ್ದಾಗ ಅಧಿಕಾರಿ ಕಪಾಳಕ್ಕೆ ಹೊಡೆದರು ಎಂಬ ಮಾತನ್ನು ಹೇಳಿದಾಗ ತಾವು ನೋಡಿಲ್ಲದೇ ಹೇಳುವುದು ಸರಿಯಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆ ಬಗ್ಗೆ ಈ ಸಭೆಯಲ್ಲಿ ಸಮರ್ಥನೆ ಮಾಡಿದರೆ ಈ ಸಭೆಯ ನಡವಳಿಕೆಯಲ್ಲಿ ಅದು ಹೋದರೆ ಎವಿಡೆನ್ಸ್ ಆಕ್ಟ್ ಪ್ರಕಾರ ವಿಚಾರಣೆ ನಡೆಯುವಾಗ ಇದನ್ನು ಸಾಕ್ಷೀಭೂತವಾಗಿ ಹೇಳುವುದಕ್ಕೆ ಸಾಧ್ಯವಿದೆ ಎಂಬ ದೃಷ್ಟಿಯಿಂದ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಆ ಅಧಿಕಾರಿ ಕಪಾಳಕ್ಕೆ ಹೊಡೆದಿದ್ದಾರೆ ಎಂಬ ತೀರ್ಮಾನಕ್ಕೆ ಏಕೆ ಬರಬೇಕು?

ಶ್ರೀ ಎಂ. ರಘುಪತಿ.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ?

ಶ್ರೀ ಕೆ.ಹೆಚ್. ರಂಗನಾಥ್.—ಈ ದೃಷ್ಟಿಯಿಂದ...

ಶ್ರೀ ಎಂ. ರಘುಪತಿ.—ಅವರು ಸದನದ ನಿಯಮಾವಳಿಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ನಾನೂ ರೂಲ್ಸ್ ಹೇಳುತ್ತಿದ್ದೇನೆ ಕೇಳಿ. ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ನನ್ನ ಕ್ರಿಯಾಲೋಪ ಇಷ್ಟೆ: ಮಾನ್ಯ ಬಂಗಾರಪ್ಪನವರು ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೋ ಅದು ನನಗೆ ಗೊತ್ತಿಲ್ಲ; ತಪ್ಪುಗೆ ಗೊತ್ತಿದೆ, ಬಂಗಾರಪ್ಪನವರಿಗೆ ಗೊತ್ತಿದೆ. ಕಪಾಳಕ್ಕೆ ಹೊಡೆದದ್ದು ನನಗೆ ಗೊತ್ತಿಲ್ಲ. ಆಗಸ್ಟ್ ೭ನೇ ತಾರೀಖು ಬಸ್ ಚಾಲನೆ ಮಾಡುತ್ತಿದ್ದಾಗ ಆಗಿರುವ ಅನಾಹುತದ ಬಗ್ಗೆಯಾಗಲಿ ಸದನಕ್ಕೆ ಗೊತ್ತಿಲ್ಲ. ಈಗ ಇದನ್ನು ಪ್ರಸ್ತಾಪ ಮಾಡಿದರೆ ನಾನು ಕೇಳುತ್ತೇನೆ ಈ ಸರ್ಕಾರ ಬದುಕಿದೆಯೋ? ಇಲ್ಲಿಯವರೆಗೆ ಏನು ಮಾಡುತ್ತಿತ್ತು? ನಾನು ಏನು ಹೇಳುತ್ತಿದ್ದೇನೆಂದರೆ ಯಾವುದು ಸಮಂಜಸವಲ್ಲವೋ ಅದನ್ನು ಪ್ರಸ್ತಾಪ ಮಾಡುವುದು ಇಲ್ಲಿ ಅನಾವಶ್ಯಕವಾಗುತ್ತದೆ. ಒಂದು ವೇಳೆ ಅವರು ಆಡಿದ ಮಾತು ಕಡತದಲ್ಲಿ ಹೋಗಿದ್ದರೆ ಅದನ್ನು ತೆಗೆದುಹಾಕುವುದು ಸೂಕ್ತ. ಇದು ನನ್ನ ಕ್ರಿಯಾಲೋಪ. ವಿಷಯವನ್ನು ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಬೇಕಾದರೆ ತಮ್ಮ ಅಭಿಪ್ರಾಯವನ್ನು ಹೇಳಲಿ. ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಏಕೆಂದರೆ Officer is not here to defend himself, That is one aspect, There may be an enquiry tomorrow, ಇದೆಲ್ಲಾ ಇರುವಾಗ ಇದು ನಡವಳಿಕೆಯಲ್ಲಿ ಹೋಗತಕ್ಕದ್ದು ಕ್ರಮವಲ್ಲ. ಒಂದು ವೇಳೆ ಹೋಗಿದ್ದರೆ ಅದನ್ನು ತೆಗೆದುಹಾಕತಕ್ಕ ಸೌಜನ್ಯ ತಾವು ತೋರಬೇಕು. ಮುಖ್ಯಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ, ಇದರ ಬಗ್ಗೆ ವಿಷಯವನ್ನು ಅವಲಂಬಿಸುವುದು ಬೇಡ. ರಾಜಕೀಯವಾಗಿ ಬೆರೆ ಯಾರಾದರೂ ಮಾತನಾಡಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳು ಸಂಸದೀಯ ಅನುಭವವನ್ನುಳ್ಳವರು, ತಿಳಿದಂಥವರು; ಆದ್ದರಿಂದ ಎಷ್ಟು ಮಟ್ಟಿಗೆ ವಿಷಯವನ್ನು ಪ್ರಸ್ತಾಪ ಮಾಡುವುದು ಸೂಕ್ತವೋ ಅಷ್ಟನ್ನು ಮಾತ್ರ ಮಾಡುವುದು ಒಳ್ಳೆಯದು. ಈಗ ಇಡೀ ದಿವಸ ಪ್ರಸ್ತಾಪ ಮಾಡುವುದಕ್ಕೆ ಬೇಕಾದಷ್ಟು ವಸ್ತು ಸಿಕ್ಕಿದೆ. ಇದನ್ನು ಹೇಳುತ್ತಾ ಹೋದರೆ ಕೊನೆಗೆ ಎಲ್ಲಿಗೆ ಹೋಗುತ್ತದೆ? ಆಗಸ್ಟ್ ೭ನೇ ತಾರೀಖು ನಡೆದ ಘಟನೆಯನ್ನು ಇದುವರೆಗೂ ಮುಚ್ಚಿಡುವುದಕ್ಕೆ ತಮಗೆ ಏನು ಹಕ್ಕಿತ್ತು? ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಹೀಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು. ಆದ್ದರಿಂದ ನನ್ನ ಪ್ರಶ್ನೆ ಏನೆಂದರೆ ಈ ವಿಚಾರ ನಡವಳಿಕೆಯಲ್ಲಿ ಹೋಗತಕ್ಕದ್ದು ಸರಿಯಲ್ಲ. ಒಂದು ವೇಳೆ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದಾರೆ ಎಂದು ಹೇಳುವುದಕ್ಕೂ ತಯಾರಿಲ್ಲ. ಅದು ಕ್ರಮವಾಗಲಾರದು. ಆದ್ದರಿಂದ ತಾವು ದಯವಿಟ್ಟು ನನ್ನ ಕ್ರಿಯಾಲೋಪಕ್ಕೆ ಮಾನ್ಯತೆ ಕೊಟ್ಟು ನಡವಳಿಕೆಯಿಂದ ಆ ವಿಷಯವನ್ನು ತೆಗೆದುಹಾಕಬೇಕು. ಮುಖ್ಯ ಮಂತ್ರಿಗಳಿಗೆ ಈಗಲೂ ಹೇಳುತ್ತೇನೆ, ಇಷ್ಟಕ್ಕೆ ಈ ವಿಷಯ ಬಿಟ್ಟು ಯಾವ ದೃಷ್ಟಿಕೋನದಿಂದ ಹೇಳಬೇಕೋ ಅವನ್ನು ಹೇಳತಕ್ಕದ್ದು ಸೂಕ್ತ. ಕಪಾಳಕ್ಕೆ ಹೊಡೆದಿದ್ದಾರೆ, ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಎಂದು ಹೇಳುತ್ತಾ ಹೋದರೆ ಕಷ್ಟವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಹೇಳುವುದು ಮುಗಿಯಿತಲ್ಲ? ಇನ್ನೂ ಇದೆಯೆ?

ಶ್ರೀ ಕೆ.ಹೆಚ್. ರಂಗನಾಥ್.—ಇಷ್ಟೇ ಹೇಳಬೇಕು ಎಂದು ಏನಾದರೂ ನೀವು ಹೇಳಿಕಳುಹಿಸಿದ್ದೀರಾ? ಇಷ್ಟೇ ಹೇಳಬೇಕಾ ನಾನು? ಇನ್ನೂ ಇದೆಯೇ ಎಂದು ವ್ಯಂಗವಾಗಿ ಹೇಳಿದರೆ ಏನರ್ಥ?

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವೂ ಸಭಾಧ್ಯಕ್ಷರಾಗಿದ್ದಿರಿ. ಒಂದು ವಿಚಾರ ಹೇಳುವಾಗ ಎಷ್ಟು ಸಮಯ ತೆಗೆದುಕೊಳ್ಳಬೇಕೋ ಅಷ್ಟು ಮಾತ್ರ ತೆಗೆದುಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಆಯಿತು ಸ್ವಾಮಿ. ನಿಮ್ಮಿಂದ ನಾವು ಕಲಿಯಬೇಕಾಗಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಬೊಮ್ಮಾಯಿಯವರಿಂದ ನಾವು ಕಲಿಯಬೇಕಾಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಪೂರ್ತಿ ಕೇಳಬೇಕು. ಯಾವ ಉದ್ದೇಶದಿಂದ ಹೇಳುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ನಡವಳಿಕೆ

ಯಲ್ಲಿ ಹೋಗಬೇಕೋ ಹೋಗಬಾರದೋ ಎಂಬ ಬಗ್ಗೆ ಅಧ್ಯಕ್ಷರು ನಿರ್ಣಯ ಕೊಡಬಹುದು. ಆದರೆ ಹೇಳುವುದನ್ನು ಅರ್ಧದಲ್ಲೇ ನಿಲ್ಲಿಸಿದರೆ ಅಪಾರ್ಥವಾಗುತ್ತದೆ. ನಡವಳಿಕೆಯಲ್ಲಿ ಹೋಗ ಬಾರದು ಎಂದು ಹೇಳಿದರೆ ತೆಗೆದುಹಾಕೋಣ. ಉಳಿಯಬೇಕು ಎಂದರೆ ಉಳಿಯುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳು ವಿಚಾರವನ್ನು ಪ್ರಸ್ತಾಪ ಮಾಡುತ್ತಿರುವ ಧಾಟಿ...

ಅಧ್ಯಕ್ಷರು.—ಧಾಟಿ ಎಂಬ ತೀರ್ಮಾನಕ್ಕೆ ಏತಕ್ಕೆ ಬರುತ್ತೀರಿ? ಪೂರ್ತಿ ಅವರು ಹೇಳಲಿ.

SRI M. VEERAPPA MOILY.—He cannot proceed like that.

SRI RAMAKRISHNA HEGDE.—Only you can proceed.

SRI M. VEERAPPA MOILY.—Both of us can proceed.

ಶ್ರೀ ಕೆ.ಹೆಚ್. ರಂಗನಾಥ್.—ಅವರು ಹೊಡೆದಿದ್ದನ್ನು ನಾನೂ ನೋಡಿಲ್ಲ, ತಾವೂ ನೋಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ರಿಪೋರ್ಟ್ ಬಂದಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್.—ನಾವೂ ಪತ್ರಿಕೆಯಲ್ಲಿ ನೋಡಿದ್ದೇವೆ.

ಶ್ರೀ ಎಂ. ರಘುಪತಿ.—ಸರ್ಕಾರಕ್ಕೆ ವರದಿ ಬರುವುದಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಯಮದ ಉಲಂಘನೆಯಾಗುತ್ತಿದೆ ಎಂಬ ಪ್ರಸ್ತಾಪ ಬಂದಿದೆ. I will just bring to your notice what rule 311 says: It reads:

> 'No allegation of a deflamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation in to the matter or the purpose of reply'.

ಈ ಸದನದ ನಾಯಕರಾಗಿ ಬಾಕಿಯವರಿಗೆ ಹೇಳಿಕೊಡಬೇಕಾದವರು ತಾವೇ ಇನ್‌ಕ್ರಿಮಿನೇಟರಿ ರಿಮಾರ್ಕ್ಸ್ ಮಾಡಿದರೆ the Officer here is a person; he is not a member ಮಾನ್ಯ ಸಾರಿಗೆ ಮಂತ್ರಿಗಳಾದ ಪ್ರಕಾಶ್ ಅವರು ನಿಯಮಾವಳಿಯನ್ನು ಉಲ್ಲೇಖಿಸಿದರು. He cannot quote certain things which are prescriptive. ರೂಲ್ ೩೧೨ರ ಪ್ರಕಾರವೂ ಇದನ್ನು ಎತ್ತುವುದಕ್ಕಾಗುವುದಿಲ್ಲ, ಸನ್ಮಾನ್ಯ ಕೆ.ಎನ್. ನಾಗೇಗೌಡರ ವಿಚಾರ

ಅಧ್ಯಕ್ಷರು.—ಒಟ್ಟಿನಲ್ಲಿ ಬಂಗಾರಪ್ಪನವರೂ ಈ ವಿಷಯವನ್ನು ಎತ್ತುವುದಕ್ಕಾಗುವುದಿಲ್ಲ. ಅವರು ಕನ್‌ವಿನ್ಸ್ ಮಾಡುತ್ತೇನೆ ಎಂದು ಹೇಳಿದ್ದಕ್ಕೋಸ್ಕರ ಅವಕಾಶ ಕೊಟ್ಟೆ. ಆದರೆ ವ್ಯಾಪ್ತಿ ಜಾಸ್ತಿ ಹೋಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕಡೆಯಿಂದ ಮಾತ್ರವಲ್ಲ ಆ ಕಡೆಯಿಂದಲೂ ವಿಚಾರದ ವ್ಯಾಪ್ತಿ ಹೋಗಿದೆ. ಅಧಿಕಾರಿಗಳ ಬಗ್ಗೆ ಇನ್‌ವೆಸ್ಟಿಗೇಟ್ ಮಾಡಿ. ಮಾಡಬೇಡಿ ಎಂದು ಹೇಳುತ್ತಿಲ್ಲ. ಆದರೆ ಅಧಿಕಾರಿಗಳ ಬಗ್ಗೆ ತಾವೇ ಈ ರೀತಿ ಹೇಳುವುದು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ತನಿಖೆ ಮಾಡಿ. ಬೇಡ ಎಂದು ಹೇಳುವುದಿಲ್ಲ.

ಇಲ್ಲಿ ಯಾರ ಪರವಾಗಿ ವಾದ ಮಾಡುವುದಕ್ಕೆ ಯಾರೂ ನಿಂತಿಲ್ಲ. ಉನ್ನತ ಅಧಿಕಾರ ಹೊಂದಿರತಕ್ಕ ಯಾವುದೇ ಒಬ್ಬ ಅಧಿಕಾರಿಯ ಮೇಲೆ ಆಪಾದನೆ ಮಾಡತಕ್ಕ ಪರಿಸ್ಥಿತಿಗೆ ತಮ್ಮ ಸ್ಥಾನವನ್ನು ಹೊಯ್ದರೆ ಯಾರೂ ರಕ್ಷಣೆ ಮಾಡುವುದಕ್ಕೆ ಬರುವುದಿಲ್ಲ. ಇದರಿಂದ ಯಾವುದೇ ಅಧಿಕಾರಿಯೂ ಆಡಳಿತವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತೇನೆ. ಆದುದರಿಂದ ಸದನದಲ್ಲಿ ಇಲ್ಲದೇ

ಇರುವ ವ್ಯಕ್ತಿಯು ಮೇಲೆ ಇನ್‌ಕ್ರಿಮಿನೇಟರಿ ರಿಪೋರ್ಟ್ ಮಾಡುವುದು ಮುಖ್ಯಮಂತ್ರಿಗಳವರಿಗಾಗಲೀ, ಮಾನ್ಯ ಸಚಿವರಿಗಾಗಲೀ ಮಾಡತಕ್ಕದ್ದು ಸಾಧುವಾದುದಲ್ಲ. ಈ ಸದನದ ನಿಯಮಕ್ಕೆ ಇದು ಸರಿಯಲ್ಲವೆಂದು ನಾನು ಹೇಳುತ್ತೇನೆ.

MR. SPEAKER.—Rule 311 does not apply to the Government Servants. The Ministers have to defend the Government Servants and I don't think Rule 311 will attract.

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ ಯಾವುದೇ ಒಬ್ಬ ಅಧಿಕಾರಿ ಎಷ್ಟೇ ಪ್ರಾಮಾಣಿಕವಾಗಿ ಇದ್ದರೂ ಅವರು ಕಾನೂನಿನ ಮಿತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಕನಕಪುರ ಕ್ಷೇತ್ರದಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಗ್ಯಾರೇಜಿನವರೆಲ್ಲರೂ ದುಡಿದಿದ್ದಾರೆಂದು ಹೇಳಿದರು. ಆದರೆ ಅಲ್ಲಿ ರಾಜ್ಯದ ಜನತೆ ಎಲ್ಲಾ ಹೋಗಿ ದುಡಿದಿದ್ದಾರೆ. ಅಲ್ಲಿ ಕೆ.ಎಸ್.ಆರ್.ಟಿ.ಸಿ.ಯವರೇ ಹೋಗಿ ದುಡಿಯಬೇಕಾಗಿರಲಿಲ್ಲ. ಒಬ್ಬ ಅಧಿಕಾರಿ ಎಷ್ಟೇ ಪ್ರಾಮಾಣಿಕನಾಗಿದ್ದರೂ ಆತ ಕಪಾಳಕ್ಕೆ ಹೊಡೆಯುವುದು ಸರಿಯಲ್ಲ ಅಲ್ಲವೇ ? ಆದ್ದರಿಂದ ಇಂತಹ ಅಧಿಕಾರಿಯನ್ನು ರಾಜ್ಯದಿಂದ ಹೊರಗಡೆ ಹಾಕಬೇಕೆಂದು ಈ ಸದನದ ಮೂಲಕ ನಾನು ಕೇಳಿಕೊಳ್ಳುತ್ತೇನೆ. ಒಬ್ಬ ಸಾಮಾನ್ಯ ಕಾರ್ಮಿಕನ ಕಪಾಳಕ್ಕೆ ಹೊಡೆಯುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ತಾವು ಹೀಗೆ ಮಾತನಾಡುವುದು ನೋಡಿದರೆ ನನಗೆ ಒಂದು ಗಾದೆ ನೆನಪಿಗೆ ಬರುತ್ತದೆ. ''ಕಲ್ಲಪ್ಪ, ಗುಂಡಪ್ಪ ಸೇರಿ ಮೆಣಸಪ್ಪ ಪುಡಿಯಾದ'' ಎಂದು. ಆದ್ದರಿಂದ ಈ ವಿಷಯ ಬಿಡಿ ನೀವು.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಈ ವಿಚಾರ ಪ್ರಸ್ತಾಪ ಮಾಡಿದ್ದು ನಾವು ಯಾರೂ ಅಲ್ಲ. ಮಾನ್ಯ ಬಂಗಾರಪ್ಪನವರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಬ್ಬ ದಕ್ಷ ಅಧಿಕಾರಿ, ಒಬ್ಬ ಉನ್ನತ ಅಧಿಕಾರಿಯನ್ನು ಯಾವುದೋ ರಾಜಕೀಯ ಕಾರ್ಯಕ್ಕಾಗಿ ಆದರೆಲ್ಲೂ ಮುಖ್ಯಮಂತ್ರಿಗಳು ಮುಖತಃ ಮೌಖಿಕವಾಗಿ ಹೇಳಿದ ಒಂದು ಆದೇಶವನ್ನು ಪಾಲನೆ ಮಾಡಿಲ್ಲ ಎನ್ನುವ ದುರುದ್ದೇಶದಿಂದ ಈ ಅಧಿಕಾರಿಯನ್ನು ಇವತ್ತು ರಜಾದ ಮೇಲೆ ಕಳುಹಿಸಿದ್ದಾರೆ ಎನ್ನುವ ಒಂದು ಸಾಮಾನ್ಯವಾದ ಇಂಪ್ರೆಷನ್ ಸಾರ್ವಜನಿಕರ ಮೇಲೆ ಆಗುತ್ತದೆ. ಅದಕ್ಕಾಗಿಯೇ ನಾನು ಈ ಘಟನೆಯ ಬಗ್ಗೆ ಪ್ರಸ್ತಾಪ ಮಾಡತಕ್ಕ ಪ್ರಸಂಗ ಬಂತು. ನಾನು ಇಲ್ಲಿ ವಿಷಯವನ್ನು ನೆರೇಟ್ ಮಾಡುತ್ತಿದ್ದೆ. ಅವರು ಆ ರೀತಿ ಮಾಡಿದ್ದಾರೆಂದು ವರದಿಯಲ್ಲಿ ಬಂದಿದೆ. ಮತ್ತು ಒಬ್ಬ ಉನ್ನತ ಅಧಿಕಾರಿ ಎಷ್ಟೇ ಒಂದು ಪ್ರಕ್ಷುಬ್ಧ ವಾತಾವರಣ ಇರಲಿ ಸಂಯಮದಿಂದ ಕೆಲಸ ಮಾಡತಕ್ಕದ್ದು ಅವರ ಕರ್ತವ್ಯ. ನಂತರ ಮಾನ್ಯ ಸಾರಿಗೆ ಸಚಿವರು ಹೇಳಿದ ಹಾಗೆ ಮತ್ತೊಂದು ಘಟನೆ ನಡೆಯಿತು. ಮಾನ್ಯ ರಂಗನಾಥ್ ಅವರು ಇಷ್ಟು ದಿವಸದಿಂದ ಸರ್ಕಾರ ಇದೆಯೇ ಅಥವಾ ಸತ್ತಿದೆಯೇ ಎಂದು ಹೇಳಿದರು. ಇಲ್ಲಿ ಕೆಲಸ ತಡ ಆಗಿದ್ದರೆ ಅದಕ್ಕೆ ಕಾರಣ ಇದೆ. ದುಡುಕದೇ ಕೆಲಸ ಮಾಡತಕ್ಕ ಒಂದು ನೀತಿ ಸರ್ಕಾರದ್ದು ಇದೆ. ಈ ನೀತಿ ಇರುವುದರಿಂದ ಇದರಲ್ಲಿ ಸ್ವಲ್ಪ ತಡವಾಗಿದೆ. ಇನ್ನು ೩೦೦ ಜನ ಖಾಸಗೀ ಕಾಂಟ್ರಾಕ್ಟ್ ಕ್ಯಾರೇಜ್ ನೌಕರರನ್ನು ತೆಗೆದುಕೊಳ್ಳುವ ಬಗ್ಗೆಯೂ ಮತ್ತು ಈ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ. ಕಾಂಟ್ರಾಕ್ಟ್ ಕ್ಯಾರೇಜಿನವರಿಗೆ ನೂರಾರು ಸಂಖ್ಯೆಯಲ್ಲಿ ಪರ್ಮಿಷನ್ ಕೊಟ್ಟಿದ್ದು ಈ ಸರ್ಕಾರವಲ್ಲ. ಇದು ಸರ್ಕಾರದ ಮೂಲಭೂತ ತತ್ವಕ್ಕೆ ವಿರುದ್ಧವಾಗಿದೆ. ಅದಾದ ನಂತರ ಒಂದೇ ಸಮನೆ ರಾತ್ರಿ ಬೆಳಗಾಗುವುದರೊಳಗಾಗಿ ನ್ಯಾಷನಲೈಸ್ ಮಾಡಿದ್ದು ಈ ಸರ್ಕಾರವಲ್ಲ. ನಂತರ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ನವರ ಜೊತೆ ಮಾತನಾಡಿ ಅನೌಪಚಾರಿಕ ಒಪ್ಪಂದಕ್ಕೆ ಬಂದವರು ಈ ಸರ್ಕಾರದವರಲ್ಲ. ಯಾವ ದಿವಸದಿಂದ ಈ ಸರ್ಕಾರ ಅಸ್ತಿತ್ವಕ್ಕೆ ಬಂತೋ ಆ ದಿವಸದಿಂದಲೇ ಯಾರು ೩೦೦ ಜನರು ಕಾಂಟ್ರಾಕ್ಟ್ ಕ್ಯಾರೇಜಿನವರು ಕೆಲಸ ಕಳೆದುಕೊಂಡರೋ ಅವರು ಪ್ರತಿ ೨ ದಿವಸಗಳಿಗೆ ಒಮ್ಮೆ ನಮ್ಮ ಮನೆ ಮುಂದೆ ಬಂದು ನಿಲ್ಲುತ್ತಿದ್ದಾರೆ. ಹಾಗೂ ಸಂಬಂಧಪಟ್ಟ ಮಂತ್ರಿಗಳವರ ಮನೆಗೂ ಹೋಗುತ್ತಿದ್ದಾರೆ. ಹಿಂದಿನ ಸರ್ಕಾರ ಮಾಡಿದ ಕೆಲಸದ ಪರಿಣಾಮವಾಗಿ ನಮಗೆ ಅನ್ಯಾಯವಾಗಿದೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಮತ್ತು ಬಂಗಾರಪ್ಪನವರು ಹೇಳಿದರು, ಇವರು ಕನಕಪುರ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ ಎಂದು. ಕನಕಪುರ ಚುನಾವಣೆಯಲ್ಲಿ ಮೈಕೋ ಕಾರ್ಮಿಕರೂ ಕೆಲಸ ಮಾಡಿದ್ದಾರೆ. ಐ.ಟಿ.ಐ. ಕೆಲಸಗಾರರೂ ಕೆಲಸ ಮಾಡಿದ್ದಾರೆ. ಜನ ತಮ್ಮ ಸ್ವಇಚ್ಛೆಯಿಂದ ಕೆಲಸ ಮಾಡಿದ್ದಾರೆ. ನಾವೇನು ಅವರಿಗೆಲ್ಲಾ ಕೆಲಸ ಕೊಡಿಸುತ್ತೇವೆ, ಪ್ರಮೋಷನ್

ಕೊಡಿಸುತ್ತೇವೆಂದು ಹೇಳಿದ್ದೇವೆಯೇ ? ಅಲ್ಲಿ ಸಾವಿರಾರು ಜನರು ಹೋಗಿ ಕೆಲಸ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇವತ್ತು ಈ ವಿಚಾರದಲ್ಲಿ ಇಲಾಖಾ ತನಿಖೆ ನಡೆಯುತ್ತಿದೆ. ಮತ್ತು ಇವರು ತಪ್ಪಿತಸ್ಥರು ಅಲ್ಲ ಎಂದು ತಿಳಿದು ಬಂದರೆ ಅವರಿಗೆ ಯಾವ ರೀತಿಯ ಶಿಕ್ಷೆಯೂ ಆಗುವುದಿಲ್ಲ. ಒಂದು ವೇಳೆ ತಪ್ಪಿತಸ್ಥರಾದರೆ ಅವರು ಶಿಕ್ಷೆಯನ್ನು ಅನುಭವಿಸಲೇಬೇಕು. ದೊಡ ವರೇ ಆಗಲೀ, ಚಿಕ್ಕವರೇ ಆಗಲಿ ಕರ್ತವ್ಯದಲ್ಲಿ ಚ್ಯುತಿ ಮಾಡಿದರೆ ಅದರ ಫಲ ಅವರಿಗೆ ಸಿಗಲೇಬೇಕು. ಮಾನ್ಯ ಬಂಗಾರಪ್ಪನವರಿಗೆ ಈ ಅಭ್ಯಾಸ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಸದನದ ಮೂಲಕ ಅವರಿಗೆ ಹೇಳುತ್ತೇನೆ. ಈ ಸರ್ಕಾರ ಯಾವುದೇ ನಿರ್ಣಯದ ವಿಚಾರವಾಗಿ ಅಧಿಕಾರಿಗಳಿಗೆ ಮೌಖಿಕವಾಗಿ ಆಜ್ಞೆ ಕೊಡತಕ್ಕ ಅಭ್ಯಾಸವನ್ನು ಇಟ್ಟುಕೊಂಡಿಲ್ಲ. ನಾವು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೂ ಪ್ರಾಮಾಣಿಕವಾಗಿ ತೆಗೆದುಕೊಳ್ಳುತ್ತೇವೆಯೇ ಹೊರತು ಅವುಗಳನ್ನು ಬರೆಯಲಿಕ್ಕೆ ನಾನು ಹೆದರುವುದಿಲ್ಲ. ಅಂತಹ ಒಂದು ಕಾಲ ಇತ್ತು; ಅಧಿಕಾರಿಗಳನ್ನು ಹೇಚಿಗೆ ಸಿಕ್ಕಿಸಿ ಅವರನ್ನು ನೋಡುತ್ತಿದ್ದಂತಹ ಮಂತ್ರಿಗಳು ಇದ್ದರು. ಈ ಸಂದರ್ಭದಲ್ಲಿ ಒಂದು ಮಿಾಟಿಂಗ್ ಮಾಡಿದ್ದೇವೆ. ಇದುವರೆವಿಗೂ ತಾವು ಯಾವ ಅಧಿಕಾರಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ ಅವರ ಜೊತೆ ನಾನು ಮುಖತಃವಾಗಲೀ, ದೂರವಾಣಿಯ ಮೂಲಕವಾಗಲೀ ಸಂಭಾಷಣೆ ಮಾಡಿಲ್ಲ. ಒಂದೇ ಒಂದು ಸಲ ನಮ್ಮ ಕಛೇರಿಯಲ್ಲಿ ಮಿಾಟಿಂಗ್ ಆದದ್ದು ನಿಜ. ಬಾಕೀ ಅಧಿಕಾರಿಗಳ ಜೊತೆಗೆ ಅವರೂ ಸಹ ಬಂದಿದ್ದರು. ನಾನು ನಮ್ಮ ಸರ್ಕಾರದ ನಿಲುವನ್ನು ಆ ಅಧಿಕಾರಿಗಳೊಡನೆ ತಿಳಿಸಿದ್ದೆ. ಕಳೆದ ೫-೬ ತಿಂಗಳಿಂದ ಇವರುಗಳ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗಿದೆ, ಕಾಯ್ದೆ ಮುಖಾಂತರ, ಹೈಕೋರ್ಟ್ ತೀರ್ಮಾನ ಏನಿದೆಯೋ ಅದರ ಪರಿಮಿತಿಗೆ ಒಳಪಟ್ಟು, ಕಾಯ್ದೆ ಪರಿಮಿತಿಗೆ ಒಳಪಟ್ಟು ಅಡ್ವೋಕೇಟ್ ಜನರಲ್‌ರವರನ್ನು ಕನ್‌ಸಲ್ಟ್ ಮಾಡಿ, ಮಾನವೀಯತೆಯನ್ನು ಗಣನೆಗೆ ತೆಗೆದುಕೊಂಡು ಈ ೩೦೦ ಜನರು ಏನು ನಿರ್ಗತಿಕರಾಗಿದ್ದಾರೆ ಅವರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಇವರಿಗೆ ಬೇರೆ ಕಡೆ ನೌಕರಿ ಸಿಗುವುದಿಲ್ಲ. ಇವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಹೇಳಿ ನಾವು ಮಿಾಟಿಂಗ್‌ನಲ್ಲಿ ಹೇಳಿದ್ದೇವೆ.

ಶ್ರೀ ಎಂ. ಸೂರ್ಯನಾರಾಯಣರಾವ್.—೩೦೦ ಜನರಲ್ಲ ಸ್ವಾಮಿ, ಇನ್ನೂ ಜಾಸ್ತಿ ಇದ್ದಾರೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಇವರನ್ನು ಮಾನವೀಯತೆಯ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ ಈ ಮಾತು ಹೇಳಿದ್ದು ನಿಜ. ಈ ಪ್ರಕಾರವಾಗಿ ತಡ ಆಗಿದೆ. ಅವತ್ತೇ ನಾವು ಇವರಿಗೆ ಸಹಾಯ ಮಾಡಬೇಕೆಂದಿದ್ದರೆ ಚಿಟಿಕೆ ಹೊಡೆಯುವುದರಲ್ಲಿ ಕೆಲಸ ಕೊಡಿಸಬಹುದಾಗಿತ್ತು. ಕನಕಪುರದಲ್ಲಿ ಕೆಲಸ ಮಾಡಿದ್ದಾರೆಂದೇನಾದರೂ ಅವರಿಗೆ ಪ್ರತಿಫಲ ಕೊಡಬೇಕೆಂದಿದ್ದರೆ ಪಾರಿತೋಷಕ ಕೊಡಬೇಕೆಂದಿದ್ದರೆ ಆಗಲೇ ಮಾಡಬಹುದಾಗಿತ್ತು. ಆದರೆ ಇಷ್ಟು ತಡ ಏಕಾಯಿತು ? ಇದನ್ನು ಕಾಯ್ದೆಯ ಪರಿಮಿತಿಯಲ್ಲಿ ತರಬೇಕಾಗುತ್ತದೆ. ಇದರಲ್ಲಿ ಬೇರೆಯವರೂ ಬರುತ್ತಾರೆ. ಇದು ಯಾವ ರೀತಿ ಡಿಸ್‌ಕ್ರಿಮಿನೇಟ್ ಆಗುತ್ತದೆಯೋ ಅದನ್ನೆಲ್ಲಾ ನೋಡಬೇಕಾಗುತ್ತದೆ. ಕನಕಪುರದ ಚಿನಾವಣೆಗೂ ಇಲ್ಲಿ ನಡೆದಿರುವಂಥ ಘಟನೆಗೂ ಯಾವ ಸಂಬಂಧವೂ ಇಲ್ಲ. ನಾನು ಯಾರಿಗೂ ಓರಲ್ ಆಜ್ಞೆ ಕೊಟ್ಟಿಲ್ಲ; ಹಾಗೆ ಕೊಡತಕ್ಕಂಥ ಅಭ್ಯಾಸವೂ ನನಗೆ ಇಲ್ಲ.

೧-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಯವರು ಒಂದು ವಿಚಾರವನ್ನು ತಿಳಿಸಿದ್ದಾರೆ. ಫೋನ್ ಕೂಡ ಮಾಡಿಲ್ಲ; ಕೋದಂಡರಾಮಯ್ಯನವರಿಗೆ ಆದೇಶ ಕೂಡ ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ತಾವು ಫೋನ್ ಮಾಡಿ ತಿಳಿಸಿದ್ದೀರಿ ಎಂದು ನಾನು ಹೇಳಿಲ್ಲ. ಮುಖ್ಯ ಕಾರ್ಯದರ್ಶಿಯವರ ಮೂಲಕ ಬಾಯಿಮಾತಿನ ಆಜ್ಞೆ ಕೊಟ್ಟಿದ್ದೀರಿ ಎನ್ನುವ ಮಾತನ್ನು ಹೇಳಿದ್ದೇನೆ. ಯಾವ ಮುಖ್ಯಮಂತ್ರಿ ಕೂಡ ಐ.ಪಿ.ಎಸ್ ಅಧಿಕಾರಿಗಳಿಗೆ ಡೈರೆಕ್ಟ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಅಧಿಕಾರಿ ಮೊದಲೇ ತಪ್ಪು ಮಾಡಿದ್ದರೆ ? ಅಂದರೆ ಆಗಸ್ಟ್ ೭ನೇ ತಾರೀಖು ಎಂದು ಹೇಳಿದ್ದೀರಿ, ಆಗಲೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ ಮುಖ್ಯಮಂತ್ರಿಯವರು ಕೂಡ ಮಧ್ಯ ಪ್ರವೇಶ ಮಾಡಿ ವಿಷಯವನ್ನು ತಿಳಿಸಿದ್ದಾರೆ. ಹೀಗೆ ಮಾಡುವುದರಿಂದ ಯಾರಿಗೂ ಸಹಾಯ ಮಾಡಿದಂತಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಗಸ್ಟ್ ತಿಂಗಳಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಮಧ್ಯದ ಅವಧಿ ಬಹಳ ಮುಖ್ಯವಾದದ್ದು. ಈಗ ಕೊಟ್ಟಿರತಕ್ಕ ಕಾರಣ ಬೇರೆ ಇದೆ, ಆಜ್ಞೆ ಹೊರಡಿಸಿದ್ದಾರೆಂದು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಯವರು ಹೇಳಿರತಕ್ಕ ಉತ್ತರ ಸಮಂಜಸವಾಗಿದೆ. ಮಾನ್ಯ ಪ್ರಕಾಶ್‌ರವರು ೩೦೦ ಜನ ತೆಗೆದುಕೊಳ್ಳುವುದರ ಬಗ್ಗೆ ಶ್ಲಾಘನೆ ಮಾಡಬೇಕಾಗಿತ್ತು ಎಂದು ಹೇಳಿದರು. ನಮ್ಮದು ಕೂಡ ಇದು ಸರಿಯಿಲ್ಲ ಎನ್ನುವ ಅಭಿಪ್ರಾಯವಲ್ಲ.

ಅಧ್ಯಕ್ಷರು.—ಬಳ್ಳಾರಿ ಮತ್ತು ಗುಂತಕಲ್ ನಡುವೆ ರೈಲ್ವೆ ದರೋಡೆಗೆ ಸಂಬಂಧ ಪಟ್ಟಂತೆ...

ಶ್ರೀ ರಾಮಕೃಷ್ಣ ಹೆಗಡೆ.—ಆಂಧ್ರದ ಗಡಿಯೊಳಗೆ ನಡೆದಂಥ ಘಟನೆ ಬಗ್ಗೆ ಇಲ್ಲಿ ಚರ್ಚೆ ಮಾಡಬಹುದೆ ?

ಶ್ರೀ ಎಸ್. ಬಂಗಾರಪ್ಪ.—ಬಳ್ಳಾರಿ ಜಿಲ್ಲೆಯ ವೀರಾಪುರ ನಮ್ಮ ರಾಜ್ಯದೊಳಗೆ ಬರುತ್ತೆ.

ಅಧ್ಯಕ್ಷರು.—ನಾನು ಸರ್ಕಾರದ ವರದಿಯನ್ನ ತರಿಸುವುದಕ್ಕೋಸ್ಕರ ಕಳುಹಿಸಿದ್ದೇನೆ.

ಶ್ರೀ ಬಿ. ಸ್ವಾಮಿ ರಾವ್.—ನಾನು ನೋಟೀಸ್ ಕೊಟ್ಟು ಒಂದೂವರೆ ತಿಂಗಳು ಆಯಿತು...

ಅಧ್ಯಕ್ಷರು.—ನನ್ನ ಛೇಂಬರ್‌ಗೆ ಬನ್ನಿ ಕುಳಿತುಕೊಂಡು ವಿಚಾರ ಮಾಡೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಮ್ಮ ಕ್ಷೇತ್ರದಲ್ಲಿಯೇ ಕೊಲೆಯಾಯಿತು, ತಮಗೆ ಕಳುಹಿಸಿ ಒಂದೂವರೆ ತಿಂಗಳಾಯಿತು ಇನ್ನು ಎಷ್ಟು ದಿವಸ ಕಾಯಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಗೇಣಿದಾರರ ಮನೆ ಸುಟ್ಟು ಬೂದಿ ಮಾಡಿದ್ದಾರೆ. ಸರ್ಕಾರದಿಂದ ಇದುವರೆವಿಗೂ ಉತ್ತರ ಬಂದಿಲ್ಲ ಎಂದರೆ ಏನು ಅರ್ಥ ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಸ್ವಾಮಿರಾಯರೇ, ಪ್ರತಿಯೊಂದು ಕೊಲೆಯಾಗಿರತಕ್ಕ ವಿಷಯವನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅಲ್ಲಿಂದ ಉತ್ತರ ಬರಬೇಡವೇ ?

ಶ್ರೀ ಎಸ್. ಬಂಗಾರಪ್ಪ.—ಇದು ಸರಿಯಲ್ಲ. ಸತ್ತೋರು ಸತ್ತರು; ಹೋದವರು ಹೋದರು ಎಂದರೆ ಹೇಗೆ ? ಸರ್ಕಾರದವರು ತಮಗೆ ಏತಕ್ಕೆ ಉತ್ತರ ಕಳುಹಿಸಿಕೊಟ್ಟಿಲ್ಲ. ಸರ್ಕಾರದವರು ಉತ್ತರ ಕಳುಹಿಸಿಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇಲ್ಲಿ ಕಾನೂನು ವ್ಯಾಪ್ತಿಯೊಳಗೆ ಕೆಲಸ ಮಾಡಬೇಕು. ತಾವು ಕೇಳುವುದಕ್ಕೂ ಒಂದು ಲಿಮಿಟ್ ಬೇಡವೇ ?

ಶ್ರೀ ಎಸ್. ಬಂಗಾರಪ್ಪ.—ನಾವು ಇವತ್ತೇ ಉತ್ತರ ಹೇಳಬೇಕೆಂದು ಹೇಳುತ್ತಿಲ್ಲ.

ಶ್ರೀ ಧರ್ಮಸಿಂಗ್.—ಸರ್ಕಾರ ಅಸ್ಥಿತ್ವದಲ್ಲಿದೆಯೋ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಗೇಣಿದಾರರ ಮನೆಗೆ ಬೆಂಕಿ ಹಚ್ಚಿ ನಾಲ್ಕು ಜನರನ್ನು ಸುಟ್ಟು ಹಾಕಿದ್ದಾರೆ. ಇನ್ನು ಎಷ್ಟು ದಿವಸ ಕಾಯಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಅಧ್ಯಕ್ಷರ ಪರ್‌ಮಿಷನ್ ತೆಗೆದುಕೊಂಡು ಹೇಳುತ್ತಿದ್ದೇನೆ, ತಾವು ಯಾವುದೇ ವಿಚಾರದಲ್ಲಿ ನೋಟೀಸ್ ಕೊಟ್ಟರೆ ಸರ್ಕಾರ ಉತ್ತರ ಕೊಡಬೇಕು. ಸರ್ಕಾರ ಉತ್ತರ ಕೊಡಲಿಕ್ಕೆ ತಯಾರು ಇರುತ್ತದೆ. ಸರ್ಕಾರ ಉತ್ತರ ಕೊಡದೇ ಇದ್ದರೆ ತಾವು ಎಚ್ಚರಿಕೆ ಕೊಡತಕ್ಕದ್ದು ಇದೆ.

ಶ್ರೀ ಬಿ. ಸ್ವಾಮಿರಾವ್.—ನಾನು ನೋಟೀಸ್ ಕೊಟ್ಟು ಒಂದೂವರೆ ತಿಂಗಳು ಆಯಿತು.

ಶ್ರೀ ಎಸ್.ಆರ್. ಬೊಮ್ಮಾಯಿ.—ತಡ ಆಗಿದ್ದರೆ, ನಾಳೆ ಅಥವಾ ನಾಡಿದ್ದು ಹಾಕಿದರೆ ಸರ್ಕಾದಿಂದ ಉತ್ತರ ಬರುತ್ತದೆ.

ಅಧ್ಯಕ್ಷರು.—ಸದನದ ಸದಸ್ಯರು ಸೂಚನೆಗಳನ್ನು ಕೊಡುವ ಬಗ್ಗೆ ತಾವೇ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ೩೩ಳಿಕ್ಕೆ ಒಂದು ನೋಟೀಸ್, ೭೨ ನಿಯಮಕ್ಕೆ ಒಂದು ನೋಟೀಸ್‌ನ್ನು ಪ್ರತಿಯೊಬ್ಬ ಸದಸ್ಯರು ಕೊಟ್ಟರೆ ಹೇಗೆ ?

ಒಬ್ಬ ಮಾನ್ಯ ಸದಸ್ಯರು.—ನಮಗೆ ತಾವು ಅವಕಾಶ ಕೊಡದೇ ಇದ್ದರೆ ಏನು ಮಾಡಬೇಕು ?

ಅಧ್ಯಕ್ಷರು.—೩೩ಳಿಕರ ನಿಯಮದ ವ್ಯಾಪ್ತಿಗೆ ಬರುವುದಿಲ್ಲ ಎಂದು ೭೨ನೇ ನಿಯಮಾವಳಿಯಲ್ಲಿ ನೋಟೀಸ್‌ನ್ನು ಕಳುಹಿಸುತ್ತಿದ್ದೀರಿ. ಈಗ ತಾವು ಮಾಡಿರತಕ್ಕ ನಿಯಮದ ಪ್ರಕಾರ ಶಾಸನಸಭೆ ನಡೆಯತಕ್ಕ ರೀತಿ ನೀತಿ ವ್ಯಾಪ್ತಿಯಲ್ಲಿ ಸೂಚನೆಗಳು ಬರಬೇಕೆಂದರೆ ಬ್ಯಾಲೆಟ್‌ನಲ್ಲಿ ಬರಬೇಕು. ಬ್ಯಾಲೆಟಿನಲ್ಲಿ ಬರಬೇಕೆಂದರೆ ೬೬–೬೭ ನೋಟೀಸ್‌ಗಳು ಇವೆ. ಆದರಲ್ಲಿ ಬರಲಿಲ್ಲ ಎಂದರೆ ಸರ್ಕಾರಕ್ಕೂ ಅಪಾದನೆ ಮಾಡಬೇಕಾಗಿಲ್ಲ. ಸದನಕ್ಕೂ ಅಪಾದನೆ ಮಾಡಬೇಕಾಗಿಲ್ಲ. ನಾವು ಬ್ಯಾಲೆಟ್‌ಗೆ ಪ್ರತಿ ದಿವಸ ಸೂಚನೆಗಳನ್ನು ಹಾಕುತ್ತೇವೆ. ಅದು ಬಾರದೇ ಇದ್ದರೆ ಅದಕ್ಕೆ ನಾನು ಹೊಣೆಯಲ್ಲ. ಅನುಮಾನ ಇದ್ದರೆ ಸದಸ್ಯರು ಬಂದು ತಾವೇ ಬ್ಯಾಲೆಟ್ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾವು ಅನುಮಾನ ಇಟ್ಟುಕೊಂಡು ಮಾತನಾಡುತ್ತಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ದಿವಸಕ್ಕೆ ಎರಡು ಸಾರಿ ಬ್ಯಾಲೆಟ್ ಹಾಕಿದರೆ ಸರಿಯಾಗಬಹುದು.

ಅಧ್ಯಕ್ಷರು.—ದಿವಸಕ್ಕೆ ಎರಡು ಸಾರಿ ಬ್ಯಾಲೆಟ್ ಹಾಕಬೇಕೆಂದು ಹೇಳುತ್ತಿದ್ದಾರೆ ಅದನ್ನು ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಮ್ಮ ಕಾರ್ಯಕಲಾಪದ ಬಗ್ಗೆ ಅನುಮಾನ ಮಾಡಿ ನಾನು ಮಾತನಾಡಲಿಲ್ಲ. ಈಗಿರತಕ್ಕ ನಿಯಮಾವಳಿ ಪ್ರಕಾರ ಬ್ಯಾಲೆಟ್ ಪದ್ಧತಿ ಇರುವುದರಿಂದ ರೀಚ್ ಆಗದೇ ಇರುವಾಗ ೩೩ಳಿಕರ ಪ್ರಕಾರ ಸೂಚನೆಗಳನ್ನು ಸದಸ್ಯರು ಕೆಳುಹಿಸಿಕೊಡುತ್ತಾರೆ.

ಅಧ್ಯಕ್ಷರು.—೩೩ಳಿಕರಲ್ಲಿ ನನಗೆ ಸಮಾದಾನ ಮಾಡಬೇಕಾಗಿರುವುದು. ಅರ್ಜೆನ್ಸಿ ನಿನ್ನೆ ಮೊನ್ನೆ ನಡೆದಿದ್ದು ಗವರ್ನ್‌ಮೆಂಟ್ ಕಡೆಯಿಂದ ಏನಾದರೂ ಕೆಲಸ ಫೈಲ್ಯೂರ್ ಆಗಿದ್ದರೆ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ನಾವು ಶಾಸನ ಸಭೆ ಪ್ರಾರಂಭವಾದಾಗ ನೋಟೀಸ್ ಕೊಟ್ಟಿದ್ದು.

ಅಧ್ಯಕ್ಷರು.—ತಾವು ಕೊಟ್ಟಿದ್ದು ನನ್ನ ಗಮನದಲ್ಲಿದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ೩೩ಳಿಕರ ಪ್ರಕಾರ ಕೆಳುಹಿಸಿದರೆ, ಮೂರು ದಿವಸದಲ್ಲಿಯೇ ಉತ್ತರ ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಈ ವಿಚಾರಕ್ಕೆ ಏತಕ್ಕೆ ಉತ್ತರ ರೆಡಿಮಾಡಿಕೊಂಡು ಇಟ್ಟು ಕೊಂಡಿಲ್ಲ.

ಅಧ್ಯಕ್ಷರು.—ನಾವು ತರಿಸಿಕೊಂಡು, ಅದು ಶಾಸನ ಸಭೆಗೆ ಬಂದು ಸರ್ಕಾರ ಉತ್ತರ ಕೊಡದೇ ಇದ್ದರೆ ತಾವು ಹೇಳಬೇಕು. ಈಗ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಆಗಿಲ್ಲ ಎಂದು ನಾನು ಪದೇ ಪದೇ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇಂಥ ದೊಡ್ಡ ಕೊಲೆ ಆಗಿರುವಾಗ ಸುಮ್ಮನೆ ಇದ್ದರೆ ಹೇಗೆ ?

ಅಧ್ಯಕ್ಷರು.—ತೀರ್ಥಹಳ್ಳಿ ಕ್ಷೇತ್ರದಲ್ಲಿ ಮೊನ್ನೆ ನಡೆದ ಜೋಡಿ ಕೊಲೆ ಮೊಕದ್ದಮೆ ಬಗ್ಗೆ ೨೪ ಗಂಟೆಯಲ್ಲಿ ವರದಿ ತರಿಸಿಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದಕ್ಕೆ ಏತಕ್ಕೆ ತರಿಸಿಕೊಡಬಾರದು ?

ಅಧ್ಯಕ್ಷರು.—ಇದರಲ್ಲಿ ಸರ್ಕಾರದ ತಪ್ಪು ಇಲ್ಲ. ನಿಯಮಾವಳಿ ಪ್ರಕಾರ ಇದು ಬಂದಿಲ್ಲ. ನಾಳೆ ಬಂದರೆ ನಾಳೆಯೆ, ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಕಾನೂನು ಪ್ರಕಾರ ಮಾಡಿದ್ದೀರಿ.

ಅಧ್ಯಕ್ಷರು.—ತಾವೇ ಬಾಲೆಟ್ ಎತ್ತಲಿಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದಯವಮಾಡಿ ಕ್ಷಮಿಷಬೇಕು. ನಾನು ಆ ಕೆಲಸ ಮಾಡುವುದಿಲ್ಲ. ಅಧ್ಯಕ್ಷರೆ, ನಾಳೆ ಹಿಳಿರ ಪ್ರಕಾರ ಇದನ್ನು ತೆಗೆದುಕೊಳ್ಳುತೀರಾ ?

ಅಧ್ಯಕ್ಷರು.—ಈಗ ಮತ್ತೆ ಹಿಂದಕ್ಕೆ ಹೋಗುವುದು ಬೇಡ. ಮಾನ್ಯ ಸದಸ್ಯರಾದ ನಾರಾಯಣ ಗೌಡರು ಮಾತನಾಡಲಿ.

ವಿತ್ತೀಯ ಕಾರ್ಯಕಲಾಪಗಳು

(೧೯೫೩–೮೪ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ)

ಬೇಡಿಕೆ ಸಂಖ್ಯೆ—೫೪, ೫೫—ಸಹಕಾರ ನಿಯಂತ್ರಿತ ಮಾರುಕಟ್ಟೆಗಳು.

† ಶ್ರೀ ಹೆಚ್.ಎ. ನಾರಾಯಣಗೌಡ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಮಂತ್ರಿಗಳು ತಮ್ಮ ವರದಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಅದನ್ನು ನಾನು ಸಮರ್ಥಿಸುತ್ತಾ ಅದರ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಲು ಇಷ್ಟಪಡುತ್ತೇನೆ. ನಮ್ಮ ರಾಷ್ಟ್ರದಲ್ಲಿ ಸಹಕಾರಿ ಆಂಧೋಳನ ಸುಮಾರು ೭೨–೮೦ ವರ್ಷಗಳಿಂದ ನಡೆಯುತ್ತಿತ್ತು. ಈವೊತ್ತು ಅದರ ಪ್ರಗತಿಯನ್ನು ನೋಡಿದರೆ ನಾವೆಲ್ಲರೂ ತಲೆ ತಗ್ಗಿಸತಕ್ಕ ಒಂದು ಸನ್ನಿವೇಶ ಇದೆ. ಸ್ವಾತಂತ್ರ್ಯ ನಂತರ ಸ್ವಲ್ಪ ಚಳುವಳಿಗೆ ತಿರುಗಿಕೊಂಡರೂ ಯಾವ ಘನ ಉದ್ದೇಶದಿಂದ ಈ ಚಳುವಳಿ ಆರಂಭವಾಯಿತೋ ಆ ಉದ್ದೇಶದಲ್ಲಿ ಹೇಳುವುದಾದರೆ ಇದು ಕೇವಲ ೧೦–೧೫ ಭಾಗ ಕೂಡ ಸಾಧನೆ ಮಾಡಿಲ್ಲ. ಮೊದಲು ಈ ಚಳುವಳಿ ಪ್ರಾರಂಭವಾದುದು ಹಳ್ಳಿಗರಿಗೆ, ಬಡ ರೈತರಿಗೆ ಆರ್ಥಿಕ ನೆರವನ್ನು ಕೊಡಬೇಕೆಂಬ ಘನ ಉದ್ದೇಶ ದಿಂದ ಈ ಚಳುವಳಿ ಆರಂಭವಾಯಿತು. ಆದರೆ ಈವೊತ್ತಿನ ದಿವಸ ನಾವು ಸೇವಾ ಸಹಕಾರ ಸಂಘ ಗಳನ್ನು ಏನು ನಿರ್ಮಾಣ ಮಾಡಿದ್ದೇವೆ. ಅವುಗಳ ಕಾರ್ಯ ನೋಡಿದಾಗ, ಅವುಗಳಿಗೆ ಕೊಟ್ಟಿರ ತಕ್ಕ ನೆರವನ್ನು ನೋಡಿದಾಗ, ನಿಜವಾಗಿಯೂ ಕೂಡ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ಒಂದುಸಂಸ್ಥೆಗಳ ಉದ್ದೇಶ ಎಂದರೆ, ಸಂಸ್ಥೆಗಳು ಹಂತ ಹಂತವಾಗಿ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಆಗಬೇಕೆಂಬ ಘನ ಉದ್ದೇಶದಿಂದ ಸ್ಥಾಪನೆ ಆಯಿತು. ಆದರೆ ಈವೊತ್ತು ಆ ರೀತಿಯಲ್ಲಿ ಆಗಿಲ್ಲ. ೨೨,೮೦೦ ನಾನಾ ತರಹದ ಸೇವಾ ಸಹಕಾರ ಸಂಘಗಳು ಇವೆ. ಎಂದು ಹೇಳಿದ್ದೀರಿ. ಅವುಗಳನ್ನು ನೋಡಿದಾಗ, ಬಹಳಷ್ಟು ನೂರಕ್ಕೆ ತೊಂಭತ್ತೊಂಭತ್ತು ಸಂಸ್ಥೆಗಳು ಏನು ಇವೆ ಅವು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂದು ಏನ್ ಒಂದು ಗುರಿ ಇತ್ತೋ ಆ ಗುರಿಯನ್ನು ಮುಟ್ಟಿಲ್ಲ. ಏತಕ್ಕೆ ಆ ಗುರಿಯನ್ನು ಮುಟ್ಟಿಲ್ಲ. ಏತಕ್ಕೆ ಸಾಧ್ಯವಾಗಿಲ್ಲ, ಎಂದರೆ ಸರಿಯಾಗಿ ಕೆಲಸ ಮಾಡುವ ರೀತಿಯಲ್ಲಿ ನಾವು ಆಡಳಿತದಲಿರತಕ್ಕ ರಾಜಕಾರಣಿಗಳು, ಜೊತೆಗೆ ಅಧಿಕಾರಿಗಳು ನಾವು ಇಬ್ಬರು ಕೂಡ ಸಫಲರಾಗಿಲ್ಲ ಎನ್ನುವ ಮಾತನ್ನು ನಾನು ಈ ಸದನದ ಮುಂದೆ ಹೇಳದೇ ವಿಧಿ ಇಲ್ಲ. ರೈತರ ನೆರವಿಗೆ ಸಹಕಾರ ಸಂಘಗಳು ಬೇಕು, ಬಡ ಕುಟುಂಬದವರಿಗೂ, ಮಧ್ಯಮ ವರ್ಗದವರಿಗೂ, ಕಡು ಬಡವರಿಗೂ ಸಹಕಾರ ಸಂಘದ ನೆರವು ಬೇಕೆಂದು ಸಹಕಾರ ಸಂಘಗಳು ಸ್ಥಾಪನೆ ಆಗಿದ್ದು ಸಹಕಾರ ರಂಗದಲ್ಲಿ ಬಹಳಷ್ಟು ವರ್ಷಗಳ ಕಾಲದ ದುಡಿದ ನನ್ನ ಅನುಭವ ಹೇಳಬೇಕೆಂದರೆ, ಹಳ್ಳಿಯ ಮಟ್ಟದಿಂದ, ರಾಜ್ಯಮಟ್ಟದವರೆಗೆ ಅನುಭವ ಕೇಳಬೇಕೆಂದರೆ ಈ ನೆರವಿನಲ್ಲಿ ರಾಜಕೀಯ ಪ್ರವೇಶ ಮಾಡಿದ್ದರಿ ಫಲದಿಂದ ಈ ಒಂದು ಚಳುವಳಿ ಸಫಲವಾಗುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳಬೇಕಾಗಿದೆ. ಈ ೨೨,೮೦೦ ಸಹ ಕಾರ ಸಂಘಗಳಲ್ಲಿರತಕ್ಕ ಸಿಬ್ಬಂದಿ ವರ್ಗವನ್ನು ನೋಡಿದರೆ ಸುಮಾರು ೧೫೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸತಕ್ಕಂಥಸಿ ಸಿಬ್ಬಂದಿವರ್ಗ ಅಲ್ಲಿದೆ. ಮೇಲ್ಮಟ್ಟದಲ್ಲಿ ಮಾತ್ರ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಇದ್ದು ಈ ರೀತಿಯ ಒಂದು ಸಿಬ್ಬಂದಿವರ್ಗ ಬೃಹದಾಕಾರವಾಗಿ ಅಲ್ಲಿ ಬೆಳೆದಿದೆ ಕೆಳಮಟ್ಟದಲ್ಲಿ ನೋಡಿದರೆ ಯಾರಿದ್ದಾರೆ ? ಈ ೨೨,೮೦೦ ಸಹಕಾರ ಸಂಸ್ಥೆಗಳು ಏನಿವೆ ಇವು ೧,೫೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸತಕ್ಕ ಸಂಸ್ಥೆಗಳು. ಇವುಗಳ ಮೇಲ್ವಿಚಾರಣೆ ನೋಡಲಿಕ್ಕೆ ಕೆಳ